ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 38 ಡಿಸೆಂಬರ್ 2, 1979 40 ಪೈಸೆ

ಅಪಾಯದ ಸೂಚನೆ ?

ಲೋಕಸಭಾ ಚುನಾವಣೆಯು ಹತ್ತಿರ ಬಂದಂತೆಲ್ಲಾ ರಾಜಕೀಯ ಗೊಂದಲ, ಪಕ್ಷಾಂತರ, ಅನಿಶ್ಚಿತತೆಗಳು ಹೆಚ್ಚುತ್ತಲಿವೆ. ಲೋಕಸಭಾ ಚುನಾವಣೆಯನ್ನು ಘೋಷಿಸಿದ ಸಂದರ್ಭದಲ್ಲಿ, ರಾಷ್ಟ್ರದಾದ್ಯಂತ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಮತ್ತು ಆರ್. ಎಸ್. ಎಸ್.-ಜನಸಂಘ ನಿಯಂತ್ರಿತ ಜನತಾಪಕ್ಷವನ್ನು ಸೋಲಿಸಲು ಒಂದಾಗಬೇಕೆಂಬುದು ಎಲ್ಲಾ ಕೋಮುವಾದಿ ಮತ್ತು ಸರ್ವಾಧಿಕಾರಿ ವಿರೋಧಿ ಶಕ್ತಿಗಳ ಆಸೆಯಾಗಿತ್ತು. ಜನತಾಪಕ್ಷದಲ್ಲಿ ಇನ್ನೂ ಉಳಿದಿರುವ ಜಾತ್ಯಾತೀತ ಶಕ್ತಿಗಳೂ, ಹಾಗೆಯೇ ಇಂದಿರಾ ಕಾಂಗ್ರೆಸ್ಸಿನಲ್ಲಿರುವ ಪ್ರಜಾಪ್ರಭುತ್ವ ಶಕ್ತಿಗಳೂ ಈ ದಿಸೆಯಲ್ಲಿ ಯೋಚಿಸುವವೆಂದೂ ಆಶಿಸಲಾಗಿತ್ತು. ಆದರೆ ಸರ್ವಾಧಿಕಾರ ಮತ್ತು ಕೋಮುವಾದ ವಿರೋಧ ಐಕ್ಯತೆಯನ್ನು ಎಷ್ಟು ಬೆಳೆಸಬೇಕೋ ಅಷ್ಟು ಇನ್ನೂ ಬೆಳೆದಿಲ್ಲ. ಲೋಕದಳ-ಕಾಂಗ್ರೆಸ್ ಕೂಟ ಮತ್ತು ಈ ಪಕ್ಷಗಳ ನಿಲುಮೆಗಳು ಈ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ಇತ್ತಂತಿಲ್ಲ.

ಆದರೆ ಈ ಅನಿಶ್ಚಿತತೆ, ಗೊಂದಲಗಳ ಪ್ರಯೋಜನವನ್ನು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಪಡೆಯುವುದು ಸ್ಪಷ್ಟವಾಗುತ್ತಲಿದೆ. ಜನತಾ

ಸಂಪಾದಕೀಯ

ಪಕ್ಷ, ಕಾಂಗ್ರೆಸ್‌ಪಕ್ಷ, ಮತ್ತು ಲೋಕದಳವನ್ನು ತ್ಯಜಿಸಿ ಈಗಾಗಲೇ ಕೆಲವು ಪ್ರಮುಖರು ಇಂದಿರಾ ಕಾಂಗ್ರೆಸ್ಸನ್ನು ಸೇರಿರುವರು. ಬ್ರಹ್ಮಾನಂದರೆಡ್ಡಿಯಂತಹವರು ಇಂದಿರಾ ಕಾಂಗ್ರೆಸ್ಸನ್ನು ಸೇರಿರುವ ಈ ಸಂದರ್ಭದಲ್ಲಿ ಜಗಜೀವನರಾಮ್ ಅವರೂ ಸೇರುವ ಸುದ್ದಿ ಬಲವಾಗುತ್ತಲಿದೆ. ಜನತಾಪಕ್ಷವನ್ನು ಜಗಜೀವನ್‌ರಾಮ್ ಅವರು ತೊರೆದರೆ ಆಶ್ಚರ್ಯವಿಲ್ಲ. ಆದರೆ ಅವರು, ಬಹುಗುಣ ಮತ್ತಿತರರಂತೆ ಇಂದಿರಾ ಕಾಂಗ್ರೆಸ್ ಸೇರುವುದು ರಾಷ್ಟ್ರದ ಹಿತ ದೃಷ್ಟಿಯಿಂದ ಅಪಾಯ. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕೂಟದಲ್ಲಿರುವ ಕೆಲವು ಗೊಂದಲಗಳು ಮತ್ತು ಕೆಲವು ರಾಜಕೀಯ ಮುಖಂಡರುಗಳ ಸಂದರ್ಭಸಾಧಕತನವು ಸರ್ವಾಧಿಕಾರ ಶಕ್ತಿಯನ್ನು ಬಲಿಷ್ಟಗೊಳಿಸುತ್ತಲಿದೆ.

ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈಗಿಂದಲೇ ಎಚ್ಚತ್ತು, ತಮ್ಮಲ್ಲಿ ಅತೀ ಹೆಚ್ಚಿನ ಒಗ್ಗಟ್ಟನ್ನು ಬೆಳೆಸಿ, ರಾಷ್ಟ್ರದ ರಾಜಕೀಯದ ತಿರುವನ್ನು ಅಪಾಯದಿಂದ ತಪ್ಪಿಸಬೇಕು. ●

ಮುಷ್ಕರ ನಿಷೇಧ ವಿರುದ್ಧ ಬೆಂಗಳೂರು ಬಂದಿಗೆ ಕರೆ

ಬಹುರಾಷ್ಟ್ರೀಯ ಕಂಪೆನಿಯಾದ ಮೈಕೋ ಕಾರ್ಖಾನೆಯ ಸಹಸ್ರಾರು ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವಂತೆ ಮಾಲಕರನ್ನು ಒತ್ತಾಯಿಸುವುದಕ್ಕೆ ಬದಲಾಗಿ, ಅಕ್ಟೋಬರ್ 5 ರಿಂದ ನಡೆಯುತ್ತಲಿರುವ ಮುಷ್ಕರವನ್ನು ಸರಕಾರವು ನಿಷೇಧಿಸಿದೆ! ಕಾರ್ಮಿಕರ ಐಕ್ಯ ಹೋರಾಟವನ್ನು ಹತ್ತಿಕ್ಕಲು ಮಾಲಕರು ನಡೆಸುವ ಕುತಂತ್ರಗಳಿಗೂ, ಗೂಂಡಾಗಿರಿಗೂ ಅಪ್ರತ್ಯಕ್ಷ ಬೆಂಬಲವನ್ನು ಸರಕಾರವೇ ಕೊಟ್ಟಂತಿದೆ. ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ನೀಲಕಂಠಯ್ಯನವರ ಮೇಲೆ ಅಮಾನುಷವಾದ ಗೂಂಡಾ ದಾಳಿ ನಡೆದಿರುವುದಾದರೂ, ಪೋಲೀಸರು ಏನೂ ಕ್ರಮ ತೆಗೆದುಕೊಂಡಂತಿಲ್ಲ. ಸರಕಾರವು ಮುಷ್ಕರವನ್ನು ನಿಷೇಧಿಸಿರುವುದಾದರೂ, ಮಾಲಕರ ಗೂಂಡಾಗಿರಿ ದಿನೇ ದಿನೇ ಹೆಚ್ಚುತ್ತಲಿದ್ದರೂ, ಮೈಕೋ ಕಾರ್ಮಿಕರು ತಮ್ಮ ಒಗ್ಗಟ್ಟನ್ನು ಇನ್ನೂ ಹೆಚ್ಚಿಸಿ, ಹೋರಾಟವನ್ನು ಮುಂದುವರಿಸುವ ನಿರ್ಣಯವನ್ನು ಮಾಡಿರುವರು.

ಮೈಕೋ ಕಾರ್ಮಿಕರ ಹೋರಾಟಕ್ಕೆ ನಗರದ ಹೆಚ್ಚಿನ ಎಲ್ಲಾ ಕಾರ್ಮಿಕ ಸಂಘಟನೆಗಳು, ರಾಜಕೀಯ ಪಕ್ಷಗಳು ತಮ್ಮ ಸಂಪೂರ್ಣ ಬೆಂಬಲವನ್ನಿತ್ತಿವೆ. ರಾಜ್ಯ ಸರಕಾರವು ಮುಷ್ಕರವನ್ನು ನಿಷೇಧಿಸಿರುವುದನ್ನು ಈ ಮೇಲೆ ಹೇಳಿದ ಎಲ್ಲರೂ ಖಂಡಿಸಿದ್ದಾರೆ. ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲಾಗಿ, ಮುಷ್ಕರವನ್ನು ನಿಷೇಧಿಸಿರುವ ರಾಜ್ಯ ಸರಕಾರದ ಕ್ರಮವು ಬಹುರಾಷ್ಟ್ರೀಯ ಕಂಪೆನಿಯು ಕಾರ್ಮಿಕರನ್ನು ಶೋಷಿಸುವುದು ಮತ್ತು ರಾಷ್ಟ್ರೀಯ ಸಂಪತ್ತನ್ನು ಕೊಳ್ಳೆ ಹೊಡೆಯುವುದಕ್ಕೆ ಬೆಂಬಲವಿತ್ತಂತಾಗಿದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಹೇಳಿಕೆ ಇತ್ತಿರುವರು.

ಸರಕಾರದ ಕ್ರಮವನ್ನು ವಿರೋಧಿಸಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿ

[ಕಡೆಯ ಪುಟ ನೋಡಿ]

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಪರ್ಧೆ ಖಚಿತ

ಸರ್ವಾಧಿಕಾರಿ ಇಂದಿರಾಕಾಂಗ್ರೆಸ್ ಮತ್ತು ಕೋಮುವಾದಿಗಳ ಹಿಡಿತದಲ್ಲಿರುವ ಜನತಾ ಪಕ್ಷಗಳನ್ನು ಜನತೆಯಿಂದ ಪ್ರತ್ಯೇಕಿಸಿ, ಸೋಲಿಸುವುದಕ್ಕಾಗಿ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಶ್ರಮಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಶ್ರಮಿಸಿದೆ. ನವೆಂಬರ್ 10 ರಂದು ಬೆಂಗಳೂರಿನಲ್ಲಿ ಸರ್ವಾಧಿಕಾರ ಮತ್ತು ಕೋಮುವಾದ ವಿರೋಧ ಸಮ್ಮೇಳನವನ್ನು ನಡೆಸುವುದರಲ್ಲಿ ಪಕ್ಷವು ಮುಖ್ಯ ಪಾತ್ರವನ್ನು ವಹಿಸಿತ್ತು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಮತ್ತು ಜನತಾಪಕ್ಷಗಳನ್ನು ಸೋಲಿಸುವ ದೃಷ್ಟಿಯಿಂದ ಸಮಾನ ಅಭಿಪ್ರಾಯವುಳ್ಳ ಪಕ್ಷಗಳು ಒಂದಾಗಿ, ಹೊಂದಾಣಿಕೆಮಾಡಿ ಚುನಾವಣಾ ಹೋರಾಟವನ್ನು ಎದುರಿಸಬೇಕೆಂಬುದು ನಮ್ಮ ನಿಲುಮೆಯಾಗಿತ್ತು. ಈ ದೃಷ್ಟಿಯಿಂದಲೇ ನಾವು ಮಂಗಳೂರು, ಬೆಂಗಳೂರು ದಕ್ಷಿಣ ಮತ್ತು ಗುಲ್ಬರ್ಗ ಕ್ಷೇತ್ರಗಳಿಂದ ಸ್ಪರ್ಧಿಸುವ ಅಭಿಪ್ರಾಯವನ್ನು ರಾಜ್ಯಸಮಿತಿಯು ವ್ಯಕ್ತ ಮಾಡಿತ್ತು. ಹೊಂದಾಣಿಕೆಯಾಗುವ ಸಾಧ್ಯತೆಗಳನ್ನು ಗಮನದಲ್ಲಿರಿಸಿಯೇ ಈ ಅಭಿಪ್ರಾಯ ಮಾಡಲಾಗಿತ್ತು. ನಮ್ಮ ಅಭಿಪ್ರಾಯಗಳನ್ನು ಇತರ ಪಕ್ಷಗಳವರಿಗೂ ತಿಳಿಸಿದ್ದೆವು.

ಆದರೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದ ವರದಿ ಪ್ರಕಾರ ಕಾಂಗ್ರೆಸ್ ಪಕ್ಷವು ಸಿ. ಪಿ. ಐ. ಗೆ ಬೆಂಗಳೂರು ದಕ್ಷಿಣವನ್ನು ಬಿಟ್ಟುಕೊಡುವುದೆಂತಲೂ, ಹಾಸನವನ್ನು ಅವಶ್ಯಬಿದ್ದಲ್ಲಿ ಲೋಕದಳಕ್ಕೆ ಬಿಟ್ಟುಕೊಡುವುದೆಂದೂ ಹೇಳಲಾಗಿದೆ. ಶ್ರೀ ದೇವರಾಜ ಅರಸು ಅವರು ಪತ್ರಿಕಾಕರ್ತರಿಗೆ ಹೇಳಿದ ಮಾತು ಇದೇ ಆಗಿತ್ತು.

ಕಾಂಗ್ರೆಸ್‌ಪಕ್ಷದ ಈ ಧೋರಣೆಯು ಸರ್ವಾಧಿಕಾರ ವಿರೋಧಿ ಶಕ್ತಿಗಳನ್ನು ಒಂದುಸೇರಿಸುವುದಕ್ಕೆ ಸಹಾಯಕವಾಗುವುದಿಲ್ಲ; ಮತ್ತು ಸರ್ವಾಧಿಕಾರಿ ಶಕ್ತಿಗೇ ಅನುಕೂಲ ಮಾಡುವಂತಿದೆ. ಇನ್ನಾದರೂ ಕಾಂಗ್ರೆಸ್ ಧುರೀಣರುಗಳು ಇದನ್ನು ಮನಗಾಣಬೇಕು. ಈ ಪರಿಸ್ಥಿತಿಯಲ್ಲಿ ಮಿತ್ರಪಕ್ಷಗಳೊಡನೆ ಹೇಳದೆ ಕೇಳದೆ ಕಾಂಗ್ರೆಸ್ ಪಕ್ಷದವರು ತಾವು ಸ್ಪರ್ಧಿಸುವ ಸ್ಥಾನಗಳ ಬಗ್ಗೆ ಮತ್ತು ಅಭ್ಯರ್ಥಿಗಳ ಬಗ್ಗೆ ಪ್ರಕಟಿಸುತ್ತಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅನಿಶ್ಚಿತತೆಯಲ್ಲೇ ಮುಂದುವರಿಯುವುದು ಸಾಧ್ಯವಿಲ್ಲ. ಆದುದರಿಂದಲೇ ಹೊಂದಾಣಿಕೆ ಆದರೂ ಆಗಿಲ್ಲವಾದರೂ ಮಂಗಳೂರು ಕ್ಷೇತ್ರದಿಂದ ಮಾರ್ಕ್ಸಿಸ್ಟ್ ಪಕ್ಷವು ಸ್ಪರ್ಧಿಸಲೇಬೇಕೆಂದು ತೀರ್ಮಾನಮಾಡಲಾಗಿದ್ದು. ಈ ಬಗ್ಗೆ ಕಾಂ. ಎಂ. ಕೆ. ಭಟ್ ಅವರು ಪತ್ರಿಕಾ ಹೇಳಿಕೆಯನ್ನು ಇತ್ತಿರುವರು. ಮಿತ್ರಪಕ್ಷಗಳು ಈ ಬಗ್ಗೆ ಕೂಡಲೇ ಯೋಚಿಸಿ ಮಂಗಳೂರು ಸ್ಥಾನವನ್ನು ನಮಗೆ ಬಿಟ್ಟುಕೊಡುವರೆಂದು ಆಶಿಸಲಾಗಿದೆ. ಹಾಗೆ ಮಾಡಿದಲ್ಲಿ ಸರ್ವಾಧಿಕಾರ ವಿರೋಧ ಹೋರಾಟಕ್ಕೆ ಹೆಚ್ಚಿನ ಬಲದೊರೆಯುವುದು ನಿಶ್ಚಯ.

ಚುನಾವಣಾ ಹೋರಾಟಕ್ಕೆ ಎಲ್ಲಾ ರೀತಿಯ ತಯಾರಿಮಾಡುವುದಕ್ಕೆ ರಾಜ್ಯದ ಎಲ್ಲಾ ಘಟಕಗಳಿಗೂ ಕರೆ ಈಯಲಾಗಿದೆ. ಪಕ್ಷದ ಅಭ್ಯರ್ಥಿಯ ಹೆಸರನ್ನು ಕೇಂದ್ರ ಸಮಿತಿಯ ಅನುಮತಿ ಪಡೆದ ಮೇಲೆ ಪ್ರಕಟಿಸಲಾಗುವುದು. ●

ವಿನಂತಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ನಿಧಿ ಸಂಗ್ರಹವು ಈಗಾಗಲೇ ಪ್ರಾರಂಭವಾಗಿದೆ. ಸರ್ವಾಧಿಕಾರಿ ಮತ್ತು ಕೋಮುವಾದಿವಿರೋಧಿ, ಪ್ರಜಾಪ್ರಭುತ್ವವಾದಿ ಹಾಗೂ ಸಮಾನ ಅಭಿಪ್ರಾಯವುಳ್ಳ ಎಲ್ಲಾ ಪಕ್ಷಗಳು, ಸಂಘ ಸಂಸ್ಥೆಗಳು, ಹಿತೈಷಿಗಳು ಉದಾರ ಧನ ಸಹಾಯ ಮಾಡುವುದರೊಂದಿಗೆ, ಈ ಚುನಾವಣೆಯಲ್ಲಿ ಎಲ್ಲಾ ರೀತಿಯಲ್ಲಿ ಸಹಕರಿಸಬೇಕಾಗಿ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ವಿನಂತಿಸಿಕೊಂಡಿದ್ದಾರೆ.

ಕುಟ್ಟದಲ್ಲಿ ಪೋಲೀಸ್ ದೌರ್ಜನ್ಯ

ನಮ್ಮ ದೇಶದಲ್ಲಿ ಬಂಡವಾಳಶಾಹಿ ಭೂಮಾಲೀಕ ವ್ಯವಸ್ಥೆ ಹಿಂದೆಂದೂ ಎದುರಿಸದ ರೀತಿಯಲ್ಲಿ ಆರ್ಥಿಕ-ಸಾಮಾಜಿಕ, ರಾಜಕೀಯ ಬಿಕ್ಕಟ್ಟಿಗೊಳಗಾಗಿದೆ. ಇದರೊಂದಿಗೆ ಕ್ರಾಂತಿಕಾರಿ ಮಜೂರ ರೈತ ಚಳುವಳಿಯೂ ವೇಗದಿಂದ ಬೆಳೆಯುತ್ತಿದೆ. ಇದರಿಂದ ಶೋಷಕ ವರ್ಗಗಳು ಕುಪಿತರಾಗಿದ್ದಾರೆ. ಹಿಂಸ್ರ ಪಶುವಿನಂತೆ ಹೆಚ್ಚುಹೆಚ್ಚು ಕ್ರೂರಿಗಳಾಗುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ, ನಮ್ಮ ಜಿಲ್ಲೆಯಲ್ಲು ಇದೇ ಪರಿಸ್ಥಿತಿ ಕಾಣುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಸಿ. ಐ. ಟಿ. ಯು. ಬೆಳೆಯುತ್ತಿದೆ. ರೈತರು-ಕಾರ್ಮಿಕರು ಸಂಘಟಿತರಾಗುತ್ತಿದ್ದಾರೆ. ಇದರಿಂದ ಸ್ವಾಭಾವಿಕವಾಗಿ ಶೋಷಿತ ವರ್ಗಗಳು ಮಜೂರರನ್ನೂ ರೈತರನ್ನೂ, ರೈತಕೂಲಿಗಾರರನ್ನೂ ಕೊಳ್ಳೆಹೊಡೆದು ಅವರ ರಕ್ತ ಹೀರಿ ಜೀವಿಸುವ ದೊಡ್ಡ ತೋಟಗಳ ಮಾಲೀಕರು, ಕಾಳಸಂತೆ ವ್ಯಾಪಾರಿಗಳು ವಿವಂಚನೆಗೊಳಗಾಗಿದ್ದಾರೆ. ಸಂಘಟಿತರಾಗುತ್ತಿರುವ ಮಜೂರರ ವಿರುದ್ಧ ಅವರು ಕ್ರೂರವಾದ ಮರ್ದನ ಪ್ರಾರಂಭಿಸಿದ್ದಾರೆ. ಅವರು ಇದಕ್ಕಾಗಿ ನಿರ್ಮಿಸಿರುವ ಪೋಲೀಸ್ ಇಲಾಖೆ ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ಮಜೂರರು ಮತ್ತವರ ಸಂಘಟಕರ ಮೇಲೆ ಹಾರಿ ಬೀಳುತ್ತಿದ್ದಾರೆ.

ಹರಿಯಾನದ ಫರಿದಾಬಾದ್‌ನಲ್ಲಿ, ಮಧ್ಯ ಪ್ರದೇಶದಲ್ಲಿ, ತಮಿಳ್ನಾಡಿನಲ್ಲಿ ಎಲ್ಲಾ ನಾವು ಇದನ್ನೇ ಕಾಣುತ್ತಿದ್ದೇವೆ. ನಮ್ಮ ರಾಜ್ಯದಲ್ಲೇ ಬೆಂಗಳೂರಿನ ತಾತಗುಣಿ ಎಸ್ಟೇಟ್‌ನಲ್ಲಿ, ಮೈಕೋ ಕಾರ್ಖಾನೆಯಲ್ಲಿ ದಾಂಡೇಲಿಯಲ್ಲಿ, ಹಳಿಯಾಳದಲ್ಲಿ ಈ ದಬ್ಬಾಳಿಕೆಗಳ ಪ್ರತ್ಯಕ್ಷ ನಿದರ್ಶನ ದೊರೆಯುತ್ತಿದೆ.

ನಮ್ಮ ಜಿಲ್ಲೆಯ ಶ್ರೀಮಂಗಲ-ಕುಟ್ಟ ಪ್ರದೇಶದಲ್ಲಿ ಕಳೆದ ತಿಂಗಳ ಕೊನೆಯ ನಾಲ್ಕೈದು ದಿನಗಳ ಘಟನೆಯು ಇದಕ್ಕೆ ಸಾಕ್ಷಿಯಾಗಿದೆ. ಪೋಲೀಸ್ ಖಾತೆ ಸಾಮಾನ್ಯ ಜನರ ರಕ್ಷಣೆಗಾಗಿ ಇರುವುದಲ್ಲವೆಂದೂ, ಬಂಡವಾಳಶಾಹಿ-ಭೂಮಾಲೀಕ ವರ್ಗಗಳ, ಶ್ರೀಮಂತ ವರ್ಗಗಳ, ಶೋಷಕ ವರ್ಗಗಳ ಸೇವೆಗಾಗಿ ಇರುವ ಅದರಿಂದಲೇ ಸೃಷ್ಟಿಸಲ್ಪಟ್ಟ ಖಾತೆ ಎಂಬುದನ್ನು ಈ ಘಟನೆಗಳು ಸ್ಪಷ್ಟವಾಗಿ ನಿರೂಪಿಸುತ್ತವೆ.

ಕುಟ್ಟದಲ್ಲಿ ಫೈತ್ ಉಣ್ಣಾಮಲ್ಲೈ ಎಸ್ಟೇಟಿಗೆ ಸೇರಿದ ತೋಟಗಳ ಕಾರ್ಮಿಕರು ಸಿ. ಐ. ಟಿ. ಯು. ಗೆ ಸೇರಿರುವುದು ಸ್ವಾಭಾವಿಕವಾಗಿ ಮಾಲೀಕರಿಗೆ ಅಸಹನೀಯವಾಯಿತು. ಮ್ಯಾನೇಜ್‌ಮೆಂಟಿನ ಕಿರುಕುಳ ಪ್ರಾರಂಭವಾಯಿತು.

ಯೂನಿಯನ್ನಿಗೆ ಸೇರಿದ ಕಾರ್ಮಿಕರಲ್ಲಿ ಕೆಲವರ ಮೇಲೆ ಸುಳ್ಳು ದೂರು ಕೊಡಿಸಲಾಯಿತು. ಪೋಲೀಸ್ ಸ್ಟೇಷನ್ನಿಗೆ ಹೋಗಬೇಕೆಂದು ತಿಳಿಸುವ ನೋಟೀಸನ್ನು ತೋಟದ ಮ್ಯಾನೇಜರ್ ಕೊಟ್ಟಾಗ ಪೋಲೀಸ್ ಸ್ಟೇಷನ್ನಿಗೆ ಬರಬೇಕೆಂದು ತಿಳಿಸುವ ಅಧಿಕಾರ ಪೋಲೀಸರಿಗೆ ಇರುವುದೆಂದೂ ಮ್ಯಾನೇಜರ್ ಕೊಡುವ ನೋಟೀಸಿಗೆ ನಾವು ಮನ್ನಣೆ ನೀಡುವುದಿಲ್ಲವೆಂದೂ ಕೆಲಸಗಾರರು ಸ್ಟೇಷನ್ನಿಗೆ ಹೋಗಲು ನಿರಾಕರಿಸಿದರು. ಈ ದೂರಿನ ಆಧಾರದಲ್ಲಿ ತಾರೀಕು 29-10-79 ರಂದು ಸಂಜೆ ಕೆಲವು ಪೋಲೀಸರು ಕಾರ್ಮಿಕರ ಲೈನಿಗೆ ಬಂದರು. ಬಂದ ಪೋಲೀಸರು ತೂರಾಡುತ್ತಾ ಬಂದದ್ದು ಗಮನಿಸಬೇಕಾದ ಅಂಶ. ತೊದಲುವ ದನಿಯಲ್ಲಿ ಕಾರ್ಮಿಕರನ್ನು ಕೂಗಿ ಕರೆದರು. ಊಟದ ನಂತರ ಮಲಗುವ ಸಿದ್ಧತೆಯಲ್ಲಿದ್ದ ಕಾರ್ಮಿಕರು ಹೊರಬಂದು ನೋಡುವಾಗ ತೂರಾಡುತ್ತಾ ಇರುವ ಪೋಲೀಸರನ್ನು ಕಾರ್ಮಿಕರು ಕಂಡರು. ಕೆಲವು ಹೆಂಗಸರೂ ಗಂಡಸರೂ ಠಾಣೆಗೆ ಬರಬೇಕೆಂದೂ ಇಲ್ಲದಿದ್ದರೆ ಮೂಳೆಮುರಿಯುವುದಾಗಿಯೂ ಈ ಪೋಲೀಸರು ಬೆದರಿಸಿದರು. ರಾತ್ರಿಯವೇಳೆಯಾದ್ದರಿಂದ ಸ್ತ್ರೀಯರು ಠಾಣೆಗೆ ಬರಲಾರರೆಂದು ಬೆಳಿಗ್ಗೆ ಬರುವರೆಂದೂ ಕಾರ್ಮಿಕರು ತಿಳಿಸಿದರು. ಆಗ ಪೋಲೀಸರು ಬಲ ಪ್ರಯೋಗ ಪ್ರಾರಂಭಿಸಿದರು. ಹೆಂಗಸರು ಮಕ್ಕಳ ಮೇಲೆಲ್ಲಾ ಲಾಠಿ ಪ್ರಯೋಗ ಪ್ರಾರಂಭಿಸಿದರು. ತೃಪ್ತಿಯಾಗುವವರೆಗೂ ಹೊಡೆದು "ಇನ್ನು ಮ್ಯಾನೇಜರರನ್ನು ಕಂಡು ಹೋಗುವ" ಎಂದು ಅಲ್ಲಿಂದ ತೂರಾಡುತ್ತಾ ತೆರಳಿದರು.

ಮರುದಿನ ಕಾರ್ಮಿಕರು ಪೋಲೀಸರ ಈ ಕ್ರೌರ್ಯವನ್ನು ಖಂಡಿಸಿ ಶಾಂತವಾಗಿ ಸಭೆ ಮೆರವಣಿಗೆಗಳನ್ನು ನಡೆಸಿದರು.

ಮಾರನೇ ದಿನ 31-10-79ರಂದು ಅಂದಾಜು 11-30 (ಬೆಳಿಗ್ಗೆ) ವೇಳೆಯಲ್ಲಿ ಉಣ್ಣಾಮಲ್ಲೈ ತೋಟದ ಮ್ಯಾನೇಜರ್ ಕುಟ್ಟ ಠಾಣೆಗೆ ಬಂದರು. ಕೂಡಲೇ ಎರಡು ಖಾಸಗಿ ವಾಹನಗಳಲ್ಲಿ ಪೋಲೀಸ್ ಅಧಿಕಾರಿಗಳು ತೋಟಕ್ಕೆ ತೆರಳಿದರು. ಕೆಲಸ ಮಾಡುತ್ತಿರುವಲ್ಲಿಂದ 6ಮಂದಿ ಕಾರ್ಮಿಕರನ್ನು ಪೋಲೀಸರು ದಸ್ತಗಿರಿ ಮಾಡಿದರು.

ಈ ಬಗ್ಗೆ ಸಿ. ಐ. ಟಿ. ಯು. ಕಾರ್ಯಕರ್ತರು ಪೋಲೀಸರನ್ನು ವಿಚಾರಿಸಿದಾಗ ತಾರೀಕು 29ರ ರಾತ್ರಿತೋಟಕ್ಕೆ ಬಂದ ಪೋಲೀಸರಲ್ಲಿ ಒಬ್ಬನ ಟೋಪಿ ಕಾಣೆಯಾಗಿದೆ ಎಂದೂ ಇದಕ್ಕೆ ಕಾರ್ಮಿಕರೇ ಕಾರಣವೆಂದು ತಾವು ಶಂಕಿಸುವುದಾಗಿಯೂ ಅದನ್ನು ಹಿಂದೆ ತಂದು ಕೊಡಲೂ ತಿಳಿಸಿದರು.

ತಾರೀಕು 29 ರಂದು ಅಮಲಿನಲ್ಲಿದ್ದ ಪೋಲೀಸರು ತೂರಾಡುತ್ತಾ ಎಲ್ಲೆಲ್ಲಿ ಹೋಗಿದ್ದರೋ ಅವರಿಗೇ ತಿಳಿಯದು. ಈಗ ತಮ್ಮ ತಪ್ಪನ್ನು ಬಚ್ಚಿಡಲು ಟೋಪಿ ಕಾಣೆಯಾಗಲು ಕಾರ್ಮಿಕರೇ ಕಾರಣವೆಂಬ ಸುಳ್ಳು ಆರೋಪ ಹರಡಿಸಿ ತಾವು ಅಮಲಿನಲ್ಲಿದ್ದ ಸತ್ಯವನ್ನು ಬಚ್ಚಿಡಲು ಹಂಚಿಕೆ ಹೂಡಿದ್ದು ಸ್ಪಷ್ಟವಾಗಿತ್ತು.

ಮಜೂರರ ಕಾರ್ಯಕರ್ತರು ಈ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ಪೋಲೀಸ್ ಟೋಪಿ ತಮಗೆ ಬೇಕಿಲ್ಲವೆಂದೂ, ತಾವೆಂದೂ ತೆಗೆದಿಲ್ಲವೆಂದೂ ವಿವರಿಸಿದರು.

6 ಜನರನ್ನು ಪೋಲೀಸರು ಬಂಧಿಸಿದ್ದು ಕಾರ್ಮಿಕರಿಗೆ ತಿಳಿಯದೆ ಅವರು ಕಾಣೆಯಾಗಿದ್ದಾರೆಂದು ತಾರೀಕು 31 ರಂದು ಉಳಿದ ಕಾರ್ಮಿಕರು ಮ್ಯಾನೇಜರ್‌ರವರಿಗೆ ತಿಳಿಸಲು ಹೋದರು. ಆಗ ಮ್ಯಾನೇಜರರು ತೋಟದಲ್ಲೆಲ್ಲಾ ಹುಡುಕಲು ತಿಳಿಸಿದರು. ತೋಟದಲ್ಲೆಲ್ಲಾ ಹುಡುಕಾಡಿದ ಕೆಲಸಗಾರರು ಮ್ಯಾನೇಜರ್‌ರವರ ಬಂಗಲೆಗೆ ಮತ್ತೆ ಬಂದರು. ಆಗ ಮ್ಯಾನೇಜರರು ಕೆಲಸಗಾರರನ್ನು ಅಲ್ಲಿಯೇ ಇರಲು ತಿಳಿಸಿ ಪೋಲೀಸರಿಗೆ ಫೋನ್ ಮಾಡಿದರು. ಪೋಲೀಸರು ಬಂದಾಗ ಮ್ಯಾನೇಜರ್‌ರವರು ಅವರೊಡನೆ ಕೆಲಸಗಾರರು ತನ್ನ ಮನೆಯ ಮೇಲೆ ಮುತ್ತಿಗೆ ಹಾಕಲು ಬಂದಿದ್ದಾರೆಂದು ಸುಳ್ಳು ಹೇಳಿದರು. ಆದರೆ ಕಾರ್ಮಿಕ ಮುಖಂಡರ ಸಕಾಲಿಕ ಮಧ್ಯಪ್ರವೇಶದಿಂದಾಗಿ ಅಹಿತಕರ ಘಟನೆಗಳೇನೂ ಸಂಭವಿಸಲಿಲ್ಲ. ಡಿ. ವೈ. ಎಸ್. ಪಿ. ಯವರು ಕಾರ್ಮಿಕರೊಡನೆ 6 ಜನ ಕಾರ್ಮಿಕರು ಬಂಧನದಲ್ಲಿದ್ದಾರೆಂದೂ ಮಾರನೇ ದಿನ ಅವರನ್ನು ಜಾಮೀನಿನಲ್ಲಿ ಬಿಡುವುದಾಗಿಯೂ ಭರವಸೆ ಇತ್ತರು. ಆನಂತರ ಕೆಲಸಗಾರರು ತಮ್ಮತಮ್ಮ ಗುಡಿಸಲುಗಳಿಗೆ ಹಿಂದಿರುಗಿದರು.

ಈ ಬಂಧನದ ಬಗ್ಗೆ ವಿಚಾರಿಸಲು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಸಹಕಾರ್ಯದರ್ಶಿಗಳಾದ ಕಾಂ. ಲತೀಫ್, ಕಾಂ. ಕುಟ್ಟಪ್ಪ ಮತ್ತು ಕಾಂ. ನಾರಾಯಣ ಇವರುಗಳು ತಾ. 1-11-79ರಂದು ಶ್ರೀಮಂಗಲ ಪೋಲೀಸ್ ಠಾಣೆಗೆ ಹೋಗಿದ್ದರು. ಅಲ್ಲಿ ಬಂಧಿತ ಕಾರ್ಮಿಕರ ಬಗ್ಗೆ ವಿಚಾರಿಸಿ ಹೊರ ಬರುವಾಗ ಪೋಲೀಸ್ ವ್ಯಾನ್‌ನಲ್ಲಿ ಹೆಂಗಸರು ಕೈಗೂಸುಗಳನ್ನೊಳಗೊಂಡು 20-25 ಜನರನ್ನು ಪೋಲೀಸರು ಕರೆತಂದು ಠಾಣೆಯ ಮುಂದೆ ಇಳಿಸಿದರು. ಆನಂತರ ಯೂನಿಯನ್ನಿನ ಮೇಲೆ ತಿಳಿಸಿದ ಕಾರ್ಯಕರ್ತರನ್ನೊಳಗೊಂಡು ಕಾರ್ಮಿಕರನ್ನೆಲ್ಲಾ ಬಂಧಿಸಿರುವುದಾಗಿ ಪೋಲೀಸರು ಹೇಳಿದರು. ಹೀಗೆ ಯಾವುದೇ ಕಾರಣವಿಲ್ಲದೆ ಬಂಧಿಸಿ ಅನಂತರ ಮಜೂರರು ಮುಷ್ಕರದ ಬೆದರಿಕೆ, ಘೆರಾವೋದ ಬೆದರಿಕೆ ಹಾಕಿದರು ಎಂಬ ಸುಳ್ಳು ಸುದ್ದಿಯನ್ನು ಪೋಲೀಸರು ಸೃಷ್ಟಿಸಿ ಪ್ರಚಾರ ಮಾಡಿದರು. ತಾ. 2-11-79ರಂದು ಅವರನ್ನೆಲ್ಲಾ ವಿರಾಜಪೇಟೆಗೆ ತಂದು ಅಲ್ಲಿ ಜಾಮೀನಿನ ಮೇಲೆ ಬಿಡಲಾಯಿತು.

ತಾ. 12-11-79ರಂದು ಶ್ರೀಮಂಗಲದಲ್ಲಿ 144ನೇ ಸೆಕ್ಷನ್ ಜಾರಿಗೊಳಿಸಿ ಕೆಲವರನ್ನು ಬಂಧಿಸಿ ಭಯದ ವಾತಾವರಣ ಸೃಷ್ಟಿಸುವ ತಂತ್ರವನ್ನು ಪೋಲೀಸರು ಹೂಡಿದರು. ಅಂದು ದಸ್ತಗಿರಿ ಮಾಡಿದ ಕಾಂ. ಹಂಸ ಎಂಬುವವರನ್ನು ಪೋಲೀಸ್ ಅಧಿಕಾರಿಗಳು ಹೊಡೆಯುತ್ತಾ ಅವಾಚ್ಯ ಶಬ್ಧಗಳಿಂದ ಬಯ್ಯುತ್ತಾ 'ನೀವು ಹೊಟ್ಟೆಗೆ ತಿನ್ನಲು ಇಲ್ಲದ, ಹಾಕಲು ಸರಿಯಾದ ಬಟ್ಟೆ ಇಲ್ಲದ ಕೂಲಿಗಾರರು-ಲೀಡರ್‌ಗಳಾಗುತ್ತೀರೇನೋ' ಎಂದಿದ್ದರು. ಈ ಮಹಾನುಭಾವರ ದೃಷ್ಟಿಯಲ್ಲಿ ಸ್ಕಾಚ್ ವಿಸ್ಕಿ ಕೊಡುವ ತೋಟ ಮಾಲೀಕರುಗಳು ಲೀಡರ್‌ಗಳಾಗಿರಬಹುದು. ಆದರೆ ಕ್ರಾಂತಿಕಾರಿ ಚಳುವಳಿಯ ಮುಖಂಡರು ಈ ಹರಿದ ಬಟ್ಟೆಯ ಹಸಿದ ಹೊಟ್ಟೆಯ ಕಾರ್ಮಿಕರೇ ಮುಖಂಡರುಗಳಾಗುವರೆಂದೂ ಶೋಷಕ ವರ್ಗಗಳನ್ನು ಕೊನೆಗೊಳಿಸುವ ಕ್ರಾಂತಿಕಾರಿ ಹೋರಾಟದಲ್ಲಿ ಇವರೇ ಮುಖಂಡರೆಂದು ಇನ್ನಾದರೂ ಪೋಲೀಸ್ ಉನ್ನತಾಧಿಕಾರಿಗಳು ಅರಿತುಕೊಳ್ಳುವುದೊಳ್ಳೆಯದು.

ಹೀಗೆ ಕುಟ್ಟದಲ್ಲಿ ಯೂನಿಯನ್ನುಗಳ ನಡುವಣ ಜಗಳವೇನೂ ಇರಲಿಲ್ಲ. ಕಾರ್ಮಿಕರು ಆಕ್ರಮಣಾಸಕ್ತರಾಗಿ ವರ್ತಿಸಿದ್ದೂ ಇಲ್ಲ. ಕಾರ್ಮಿಕರು ಸಿ. ಐ. ಟಿ. ಯು. ಗೆ ಸೇರಿದ ಯೂನಿಯನ್ನಿನ ಸದಸ್ಯರಾಗಿ ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಸಂಘಟಿತರಾಗಲು ಹೊರಟಿದ್ದು ಮಾಲೀಕರ ದೃಷ್ಟಿಯಲ್ಲಿ ಅದ ತಪ್ಪು. ಇದಕ್ಕಾಗಿ ಮಜೂರರನ್ನು ಬೆದರಿಸಲು ಮಾಲೀಕರು ಹಲವೆಡೆ ಗೂಂಡಾಗಳನ್ನು ಉಪಯೋಗಿಸುವಂತೆ ಕುಟ್ಟದಲ್ಲಿ ಪೋಲೀಸ್ ಉನ್ನತಾಧಿಕಾರಿಗಳನ್ನು ಉಪಯೋಗಿಸಿಕೊಂಡರು. ಮತ್ತೆ ಪೋಲೀಸ್ ಉನ್ನತಾಧಿಕಾರಿಗಳು ಮಾಲೀಕರ ತಾಳಕ್ಕೆ ಸರಿಯಾಗಿ ಕುಣಿಯಲು ಮುಂದೆ ಬಂದರು.

ಆದರೆ ಮಾಲೀಕರು ಮತ್ತು ಪೋಲೀಸ್ ಉನ್ನತಾಧಿಕಾರಿಗಳು ಒಂದಾಗಿ ನಡೆಸುವ ಇಂತಹ ಒಳಸಂಚುಗಳಿಂದ ಕ್ರಾಂತಿಕಾರಿ ಚಳುವಳಿಯ ಮುನ್ನಡೆಯನ್ನು ತಡೆಯಲು ಸಾಧ್ಯವಿಲ್ಲ.

ದಶಕಗಳ ಕಾಲ ಜೀತದಾಳುಗಳಂತೆ ದುಡಿದ ಪೋಲೀಸರೇ ಇಂದು ಸಂಘಟಿತರಾಗುತ್ತಿದ್ದಾರೆ. ಅವರ ಉನ್ನತಾಧಿಕಾರಿಗಳು ಮತ್ತು ಸರಕಾರದ ಎಲ್ಲಾ ಬೆದರಿಕೆಗಳನ್ನು ಎದುರಿಸಿ ಸಂಘಟಿತರಾಗುತ್ತಿದ್ದಾರೆ. ತಾವು ದುಡಿಯುವ ವರ್ಗಕ್ಕೆ ಸೇರಿದವರೆಂದೂ ಕಾರ್ಮಿಕರು-ರೈತರು ತಮ್ಮ ವರ್ಗ ಸಹೋದರರೆಂದೂ ಅವರಲ್ಲಿ ಪ್ರಜ್ಞೆ ಮೂಡುತ್ತಿದೆ. ಹೀಗಿರುವಾಗ ಕಾರ್ಮಿಕರ ಸಂಘಟನೆಯನ್ನು ತಡೆಯಲು ಪೋಲೀಸ್ ಅಧಿಕಾರಿಗಳು, ಮಾಲಕರು ಒಂದಾದರೂ ಅವರು ವಿಫಲರಾಗುವುದರಲ್ಲಿ ಸಂಶಯವಿಲ್ಲ.

ತಮ್ಮ ಮುಂದೆ ಬೆಳೆದು ಬರುತ್ತಿರುವ ಈ ಸತ್ಯವನ್ನು ಮನಗಂಡು ಪೋಲೀಸ್ ಉನ್ನತಾಧಿಕಾರಿಗಳು ಇನ್ನಾದರೂ ಮಾಲೀಕರ-ಶೋಷಕರ ಕೈಗೊಂಬೆಗಳಂತೆ ವರ್ತಿಸುವುದನ್ನು ನಿಲ್ಲಿಸುವುದು ಒಳ್ಳೆಯದು.

●

ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರಿಂದ ಬೆಂಗಳೂರು ಚಲೋ

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ದೇವಿಕಾರಾಣಿ ರೋರಿಚ್‌ರವರ ಒಡೆತನಕ್ಕೆ ಸೇರಿದ ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರು ಕನಿಷ್ಠಕೂಲಿ ಜಾರಿ. ವಜಾ ಮಾಡಲ್ಪಟ್ಟ 11 ಜನ ಕಾರ್ಮಿಕರಿಗೆ ಪುನಃ ಕೆಲಸ, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜಾ ಸೌಲಭ್ಯ ಮತ್ತು ಸರ್ಕಾರ ಎಸ್ಟೇಟನ್ನು ಪ್ಲಾಂಟೇಷನ್ ಕಾಯಿದೆಗೆ ಸೇರಿಸಬೇಕು ಮುಂತಾದ ನ್ಯಾಯಬದ್ಧ ಬೇಡಿಕೆಗಳನ್ನಿಟ್ಟು 120 ದಿವಸಗಳಿಂದ ಎಸ್ಟೇಟ್ ಗೇಟ್ ಮುಂದೆ ಹೋರಾಟ ಮಾಡುತ್ತಿದ್ದಾರೆ.

ಹರಿಜನರ ಉದ್ಧಾರ, ದುರ್ಬಲರ ಏಳಿಗೆ ಮಾಡುತ್ತೇವೆಂದು ಕರ್ನಾಟಕದ ಮೂಲೆಮೂಲೆಯಲ್ಲಿ ಪ್ರಚಾರ ಮಾಡುತ್ತಿರುವ ರಾಜ್ಯ ಸರ್ಕಾರವು ಎಸ್ಟೇಟ್‌ನ ಹರಿಜನ ಕಾರ್ಮಿಕರ ಬೇಡಿಕೆಗಳನ್ನು ಇದುವರೆಗೆ ಈಡೇರಿಸಿಲ್ಲ.

ದಾರಿಕಾಣದ ಹರಿಜನ ಕಾರ್ಮಿಕರು ತಮ್ಮ ಸಂಘದ ನೇತೃತ್ವದಲ್ಲಿ ತಾ. 5.12.79ರಿಂದ ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ತಮಗೆ ನ್ಯಾಯ ಸಿಕ್ಕುವವರೆಗೆ ಧರಣಿ ಮುಷ್ಕರ ಮಾಡುವ ತೀರ್ಮಾನ ಮಾಡಿ ಬೆಂಗಳೂರು ನಗರಕ್ಕೆ ಕುಟುಂಬ ಸಮೇತರಾಗಿ ಕಾಲ್ನಡಿಗೆಯಲ್ಲಿ ಬರಲಿದ್ದಾರೆ. ತಮ್ಮ ನ್ಯಾಯಬದ್ಧ ಬೇಡಿಕೆಗಳ ಬೆಂಬಲಕ್ಕೆ ಹಾಗೂ ತಮ್ಮ ದಿನನಿತ್ಯದ ಊಟ ತಿಂಡಿಗಳಿಗೆ ಈ ಕಾರ್ಮಿಕರು ಬೆಂಗಳೂರಿನ ಬೀದಿಬೀದಿಯಲ್ಲಿ ಸಂಚರಿಸಿ ಸಾರ್ವಜನಿಕರ ನೆರವನ್ನು ಕೋರುತ್ತಾರೆ. ಬಡಜನರ ಪರವಾಗಿ ನಿಲ್ಲುವ ಎಲ್ಲಾ ಸಾರ್ವಜನಿಕರು ತಮ್ಮ ಕೈಲಾದ ಸಹಾಯ ಮಾಡುವಂತೆ ಬೆಂಗಳೂರು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜಗನ್ನಾಥ್ ಮನವಿ ಮಾಡಿಕೊಂಡಿದ್ದಾರೆ.

ತಾ. 5-12-78 ರಂದು ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಹರಿಜನ ಕಾರ್ಮಿಕರ ಬೆಂಬಲಾರ್ಥ ಒಂದು ಸಾರ್ವಜನಿಕ "ಬಹಿರಂಗ ಸಭೆ"ಯನ್ನು ಏರ್ಪಡಿಸಲಾಗಿದೆ. ಬೆಂಗಳೂರಿನ ನಾನಾಕಡೆಯಿಂದ ರೈತ ಕಾರ್ಮಿಕರು ಮೆರವಣಿಗೆಯಲ್ಲಿ ಸಭೆಗೆ ಭಾಗವಹಿಸುವರು. ರೈತಸಂಘ, ಕಾರ್ಮಿಕ ಸಂಘ, ವಿದ್ಯಾರ್ಥಿ ಸಂಘಟನೆ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರುಗಳು ಈ ಸಭೆಯಲ್ಲಿ ಮಾತನಾಡಲಿರುವರು.

●

ಆರ್ಥಿಕ ಸಮೀಕ್ಷೆ :

ಚೀನಾದ ಅದ್ಭುತ ಆರ್ಥಿಕ ಪ್ರಗತಿ ಭಾರತಕ್ಕೊಂದು ಸವಾಲು !

ಆರ್. ಚಂದ್ರ

ಚೀನಾ ಮತ್ತು ಭಾರತದ ಆರ್ಥಿಕ ಪ್ರಗತಿಯ ತುಲನಾತ್ಮಕ ಅಂಕೆ ಸಂಖ್ಯೆಗಳು :

	ಚೀನಾ 1978	ಭಾರತ 1978-79
ಜನಸಂಖ್ಯೆ (ಮಿಲಿಯ)	975	656
ಸರಾಸರಿರಾಷ್ಟ್ರೀಯ ಒಟ್ಟುಉತ್ಪಾದನೆ(UNP) $	605	175
ಧಾನ್ಯ ಉತ್ಪಾದನೆ (ಮಿಲಿಯಟನ್)	305	130.5
ಹತ್ತಿ (ಮಿಲಿಯಟನ್)	2.0	1.3
ವಿದ್ಯುತ್ ಉತ್ಪಾದನೆ (ಬಿಲಿಯನ್ KWH)	256	109
ಕಲ್ಲಿದ್ದಲು (ಮಿಲಿಯಟನ್)	618	102
ಕಚ್ಚಾತೈಲ (ಮಿಲಿಯಟನ್)	104	11.7
ಕಚ್ಚಾ ಉಕ್ಕು (ಮಿಲಿಯಟನ್)	31.7	7.79
ಸಿಮೆಂಟ್ (ಮಿಲಿಯಟನ್)	65.2	19.42
ವಿದೇಶಿ ವ್ಯಾಪಾರ (ಬಿಲಿಯಟನ್ $)	22.0	15.5
ರಫ್ತು ,,	10.4	7.06
ಆಮದು ,,	11.5	8.45

ಆಧಾರ: ಫಿನಾನ್ಸಿಯಲ್ ಎಕ್ಸ್‌ಪ್ರೆಸ್, 3-10-79 ರಲ್ಲಿ ಚೀನಾದ ರಾಜ್ಯ ಅಂಕಿಸಂಖ್ಯೆಗಳ ಸಂಸ್ಥೆ (SSB) ಮತ್ತು ಭಾರತದ ಯೋಜನಾ ಆಯೋಗ, ವಿಶ್ವಸಂಸ್ಥೆ ದಾಖಲೆಗಳ ಆಧರಿತ ಪ್ರಕಟಣೆ.

ಚೀನಾದ ಆರ್ಥಿಕ ಪ್ರಗತಿ :

1979 ರಂದು ಚೀನಾ ಗಣರಾಜ್ಯವು ಅಸ್ತಿತ್ವಕ್ಕೆ ಬಂದು ಮೂವತ್ತುವರ್ಷಗಳಾದವು. ಏಷ್ಯಾದ ಅತ್ಯಂತ ಹಿಂದುಳಿದ ಅರೆ-ಪಾಳೆಯಗಾರಿ ಹಾಗೂ ಅರೆ-ವಸಾಹತು ದೇಶವಾಗಿದ್ದ ಚೀನಾದಲ್ಲಿ 1949 ರಲ್ಲಿ ಸಂಭವಿಸಿದ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಯು ಜಾಗತಿಕ ವಿದ್ಯಮಾನಗಳಲ್ಲಿಯೇ ಒಂದು ಅದ್ಭುತ ಘಟನೆ. ಚೀನಾದ ಕ್ರಾಂತಿಯು 1917ರಲ್ಲಿ ರಷ್ಯಾದಲ್ಲಿ ನಡೆದ ಅಕ್ಟೋಬರ್ ಮಹಾಕ್ರಾಂತಿಯ ಹಾಗೂ ಫ್ಯಾಸಿಸಂನ ವಿರುದ್ಧ ನಡೆದ ಎರಡನೇ ಜಾಗತಿಕ ಯುದ್ಧದಲ್ಲಿ ಗಳಿಸಿದ ಚಾರಿತ್ರಿಕ ವಿಜಯಗಳ ಮುನ್ನಡೆಯೇ ಆಗಿದೆ. ಚೀನಾದ ಕ್ರಾಂತಿಯು ಜಗತ್ತಿನಾದ್ಯಂತ ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಶಕ್ತಿಗಳು ಮುನ್ನಡೆಯಲು ಪ್ರಬಲ ಪ್ರಚೋದನೆಯನ್ನೀಡಿತು, ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಪ್ರಬಲ ಪ್ರಹಾರಗಳನ್ನೀಡಿತು, ಮತ್ತು ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕಾದ ದೇಶಗಳಲ್ಲಿ ವಿಮೋಚನಾ ಹೋರಾಟಗಳಿಗೆ ತುಂಬಾ ಸ್ಫೂರ್ತಿಯನ್ನೀಡಿತು.

ಜಗತ್ತಿನಲ್ಲಿಯೇ ಅತ್ಯಂತ ಹಿಂದುಳಿದ ಹಾಗೂ ಭಾರೀ ಜನನಿಬಿಡವಾಗಿರುವ ಚೀನಾದಲ್ಲಿ ಕ್ರಾಂತಿಯ ನಂತರ ಹಿನ್ನಡೆ, ಬಡತನ, ನಿರುದ್ಯೋಗ, ನಿರಕ್ಷರತೆ, ಆಗಾಗ ಸಂಭವಿಸುತ್ತಿದ್ದ ನೆರೆ ಬರಗಾಲ ಮತ್ತು ಸಾಂಕ್ರಾಮಿಕ ಪಿಡುಗುಗಳು. ಮುಂತಾದ ಸಮಸ್ಯೆಗಳನ್ನು ಪರಿಹರಿಸುವ ಹೊಣೆಗಾರಿಕೆಯೇನೂ ಕಡಿಮೆಯದ್ದಾಗಿರಲಿಲ್ಲ. ಈ ಸಮಸ್ಯೆಗಳೊಂದಿಗೇ ಚೀನಾವು ಬಹುದೀರ್ಘ ಕಾಲದವರೆಗೆ ಅಮೇರಿಕದ ನೇತೃತ್ವದಲ್ಲಿರುವ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಆರ್ಥಿಕ ದಿಗ್ಬಂಧನ, ಮಿಲಿಟರಿ ಬೆದರಿಕೆ, ರಾಜಕೀಯ ಹಾಗೂ ಸಾಂಸ್ಕೃತಿಕ ಅಸ್ಪೃಶ್ಯತೆಗಳಿಗೂ ಒಳಗಾಗಿತ್ತು. ಸಮಾಜವಾದಿ ಹಾಗೂ ಸಮತಾವಾದಿ ಆಂದೋಳನದ ಕುರಿತು ಆಂತರಿಕ ಹಾಗೂ ಅಂತರಾಷ್ಟ್ರೀಯವಾಗಿ ತೀವ್ರ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದಾಗಿ ಚೀನಾವು ಸಾಕಷ್ಟು ಅಸ್ಥಿರತೆಗೂ ಒಳಗಾಗಿತ್ತು ಮತ್ತು ರಷ್ಯಾಮುಂತಾದ ಸಮಾಜವಾದಿ ದೇಶಗಳೊಂದಿಗೆ ಅದರ ಸಂಬಂಧಗಳೂ ಸಡಿಲಗೊಂಡಿದ್ದವು. ಇಷ್ಟೆಲ್ಲಾ ಅಡಚಣೆಗಳಿದ್ದರೂ, ಕಳೆದ ಮೂವತ್ತು ವರುಷಗಳಲ್ಲಿ ಚೀನಾವು ಸಾಧಿಸಿದ ಆರ್ಥಿಕ ಪ್ರಗತಿಯು ಅದ್ಭುತವಾಗಿದ್ದು, ಸಮಕಾಲೀನ ಭಾರತಕ್ಕೊಂದು ದೊಡ್ಡ ಸವಾಲಾಗಿದೆ.

ಭಾರತಕ್ಕೊಂದು ಸವಾಲು :

ಈ ಸಮೀಕ್ಷೆಯ ಬದಿಯಲ್ಲಿ 1978 ರಷ್ಟರಲ್ಲಿ ಚೀನಾ ಮತ್ತು ಭಾರತದ ಆರ್ಥಿಕ ಪ್ರಗತಿಯ ತುಲನಾತ್ಮಕ ಅಂಕೆ ಸಂಖ್ಯೆಗಳನ್ನು ಕೊಡಲಾಗಿದೆ. 1940ರ ದಶಕದಲ್ಲಿ ಚೀನಾವು ಭಾರತಕ್ಕಿಂತ ಭಾರೀ ಹಿಂದುಳಿದಿದ್ದರೂ, ಭಾರತ ಸ್ವಾತಂತ್ರ್ಯಗೊಂಡ ಎರಡು ವರುಷಗಳ ನಂತರ ಚೀನಾದ ಕ್ರಾಂತಿಯು ಸಂಭವಿಸಿದ್ದರೂ, ಮೂವತ್ತು ವರುಷಗಳ ನಂತರ ಚೀನಾದ ಜನಸಂಖ್ಯೆಯು ಭಾರತದ ಜನಸಂಖ್ಯೆಗಿಂತ ಒಂದೂವರೆ ಪಾಲಿನಷ್ಟಿದ್ದರೂ, ಚೀನಾದ ಜನಕೋಟಿಯ ವಾರ್ಷಿಕ ಸರಾಸರಿ ರಾಷ್ಟ್ರೀಯ ಒಟ್ಟು ಉತ್ಪಾದನೆಯು (UNP) ಭಾರತದ ನಾಲ್ಕು ಪಟ್ಟಾಗಿರುವುದನ್ನು ಗಮನಿಸಬಹುದು. ಚೀನಾದ ಧಾನ್ಯ ಮತ್ತು ವಿದ್ಯುತ್ ಉತ್ಪಾದನೆಗಳು ಭಾರತದಎರಡೂವರೆ ಪಾಲಪ್ಪಾಗಿವೆ, ಹತ್ತಿ ಉತ್ಪಾದನೆಯು ಭಾರತದ ಎರಡರಷ್ಟಾಗಿದೆ, ಕಲ್ಲಿದ್ದಲು ಮತ್ತು ಸಿಮೆಂಟು ಉತ್ಪಾದನೆಯು ಭಾರತದ ಹತ್ತರಷ್ಟಾಗಿದೆ. 1978 ರಲ್ಲಿ ಚೀನಾದ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳು 1977 ಕ್ಕಿಂತ ಅನುಕ್ರಮವಾಗಿ ಸುಮಾರು ಶೇ. 9 ಮತ್ತು ಶೇ. 22ರಷ್ಟು ಹೆಚ್ಚಾಗಿವೆ!

ಚೀನಾ ಇಂದು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿದ್ದು, ಭದ್ರತಾ ಮಂಡಳಿಯ ಖಾಯಂ ಸದಸ್ಯತ್ವವನ್ನೂ ಗಳಿಸಿದೆ. ಅದರ ಆರ್ಥಿಕ ಅಭಿವೃದ್ಧಿಯು ಸ್ವಾವಲಂಬನೆ ಮತ್ತು ಸಮಾಜವಾದಿ ತಳಹದಿಯನ್ನು ಅವಲಂಬಿಸಿದೆ. ಅಮೇರಿಕ, ಯೂರೋಪ್, ರಷ್ಯಾ, ಜಪಾನು ದೇಶಗಳಂತೆ ಚೀನಾ ಶ್ರಿಮಂತ ದೇಶವಲ್ಲವಾದರೂ, ಅಲ್ಲಿನ ಸುಮಾರು ನೂರು ಕೋಟಿ ಜನರು ಹಸಿವು, ಬಡತನ, ನಿರುದ್ಯೋಗ, ನಿರಕ್ಷರತೆ, ಅನಾರೋಗ್ಯ, ಅಜ್ಞಾನ, ಅಸಮಾನತೆ, ಶೋಷಣೆಗಳಿಂದ ಸಂಪೂರ್ಣ ಮುಕ್ತವಾಗಿದ್ದಾರೆ. ಚೀನಾದ ಜನಕೋಟಿಯ ಉತ್ಪಾದನಾ ಶಕ್ತಿಯು ನಿರಂತರವಾಗಿ ಹೆಚ್ಚುತ್ತಿದೆ ಮತ್ತು ಅವರ ಜೀವನಮಟ್ಟವೂ ತ್ವರಿತವಾಗಿ ಹೆಚ್ಚುತ್ತಿದೆ. ವಿದೇಶಿ ವ್ಯಾಪಾರದಲ್ಲಿಯೂ ಚೀನಾದ ಪೈಪೋಟಿ ಶಕ್ತಿಯು ಗಣನೀಯವಾಗಿ ಹೆಚ್ಚುತ್ತಿದೆ. ಭಾರತದ ಕೇಂದ್ರ ವಾಣಿಜ್ಯ ಮಂತ್ರಾಲಯವು ಇತ್ತೀಚೆಗೆ ಪ್ರಕಟಿಸಿದ (ಫಿನಾನ್ಸಿಯಲ್ ಎಕ್ಸ್‌ಪ್ರೆಸ್ : 3-10-79) ಒಂದು ಅಧ್ಯಯನದಂತೆ, ಆಗ್ನೇಯ ಏಷ್ಯಾ ದೇಶಗಳೊಡನೆ ಚೀನಾದ ಪೈಪೋಟಿಯು ತೀವ್ರವಾಗುತ್ತಿದೆ ಎಂದು ತಿಳಿದು ಬಂದಿದೆ. ಇಂಡೋನೇಷ್ಯಾದ ಕಚ್ಚಾತೈಲ, ಮಲೇಷ್ಯಾದ ಟಿನ್, ಥ್ಯಾಲಾಂಡಿನ ಅಕ್ಕಿ, ಭಾರತ, ಹೊಂಗ್‌ಕೊಂಗ್, ದ. ಕೊರಿಯಾ ಮತ್ತು ಸಿಂಗಾಪುರಗಳ ಇಂಜಿನಿಯರಿಂಗ್ ಸಾಮಗ್ರಿಗಳು ಚೀನಾದ ಪ್ರಬಲ ಪ್ರತಿಸ್ಪರ್ಧೆಯನ್ನು ಎದುರಿಸಬೇಕಾಗುವುದೆಂದೂ ಮೇಲಿನ ಅಧ್ಯಯನದಿಂದ ತಿಳಿದು ಬಂದಿದೆ. ಮುಖ್ಯವಾಗಿ ಭಾರತದ ಬಟ್ಟೆ, ಹಗುರ ಕೈಗಾರಿಕಾ ಸಾಮಗ್ರಿಗಳು ಮತ್ತು ಇಂಜಿನಿಯರಿಂಗ್ ಸಾಮಗ್ರಿಗಳು ಚೀನಾದ ಪ್ರಬಲ ಪೈಪೋಟಿಯನ್ನು ಎದುರಿಸಬೇಕಾಗುವುದು. ಚೀನಾದೊಡನೆ ಭಾರತದ ಪ್ರತಿಸ್ಪರ್ಧೆಯನ್ನು ಬಲಪಡಿಸುವುದು ಹೇಗೆ ?

ಶ್ರೀಮಂತ ರೈತರು ವಕ್ತಾರರು ಹೇಳುತ್ತಾರೆ, ಭಾರತಕ್ಕೆ ಕೈಗಾರಿಕೆಗಳು ಬೇಡ, ಕೃಷಿಗೇ ಪ್ರಾಧಾನ್ಯತೆ ಕೊಡಬೇಕು ಎಂದು. ಗುತ್ತೇದಾರಿ ವ್ಯಾಪಾರೋದ್ಯಮಿಗಳು ಹೇಳುತ್ತಾರೆ, ವಿದೇಶಿ ಬಂಡವಾಳವನ್ನು ಇನ್ನಷ್ಟು ಸ್ವಾಗತಿಸಬೇಕೆಂದು ಮತ್ತು ರಫ್ತು ವ್ಯಾಪಾರಕ್ಕೆ ಇನ್ನಷ್ಟು ಸರಕಾರ ಸಹಾಯಧನ ನೀಡಬೇಕು ಎಂದು. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳ ವಕ್ತಾರವಾದ ವಿಶ್ವಬ್ಯಾಂಕು ಕೂಡಾ ವಿದೇಶಿ ಬಂಡವಾಳಕ್ಕೂ, ವಿದೇಶಿ ವ್ಯಾಪಾರಕ್ಕೂ, ಕೃಷಿ ಪ್ರಾಧಾನ್ಯತೆಗೂ ಬೆಂಬಲ ಕೊಡುತ್ತಿದೆ. ಆರೋಗ್ಯ ಖಾತೆಯವರು ಭಾರತದಲ್ಲಿಯೂ ಬರಿಗಾಲು ವೈದ್ಯರನ್ನು ತಯಾರಿಸಲು ಆತುರರಾಗಿದ್ದಾರೆ ! ಚೀನಾ ಕೈಗಾರಿಕೆಗಿಂತ ಕೃಷಿಗೇ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದೆ. ತನ್ನ ಆರ್ಥಿಕ ಅಭಿವೃದ್ಧಿಗೆ ವಿದೇಶಿ ಸಾಲ ಮತ್ತು ಬಂಡವಾಳಗಳನ್ನು ಸ್ವೀಕರಿಸುತ್ತಿದೆ. ಅಮೇರಿಕಾ, ಯೂರೋಪ್, ಜಪಾನ್ ಮುಂತಾದ ಬಂಡವಾಳಶಾಹಿ ದೇಶಗಳಿಗೆ ತನ್ನ ಆಂತರಿಕ ಮಾರುಕಟ್ಟೆಯನ್ನು ತೆರೆದಿಟ್ಟಿದೆ ಹಾಗೂ ಈ ದೇಶಗಳಲ್ಲಿ ತನ್ನ ವ್ಯಾಪಾರವನ್ನು ಕುದುರಿಸಿಕೊಳ್ಳುತ್ತಿದೆ ಎಂಬ ಕಾರಣದಿಂದ, ಭಾರತಕ್ಕೂ ಅಂತಹ ಸಲಹೆಗಳನ್ನೇ ಮಾಡುತ್ತಿದ್ದಾರೆ. ಇದು ಕುರುಡರು ಆನೆ ಮುಟ್ಟಿನೋಡಿ ಆನೆ ಹೇಗಿದೆ ಎಂದು ವಿವರಣೆಕೊಟ್ಟಂತೆಯೇ ಸರಿ. ಚೀನಾದ ಆರ್ಥಿಕ ಅಭಿವೃದ್ಧಿಗೆ, ಅದರ ಪೈಪೋಟಿ ಶಕ್ತಿಗೆ ಮೂಲಭೂತವಾದ ಕಾರಣಗಳೇನು ಮತ್ತು ಅದು ಸಧ್ಯ ಅಭಿವೃದ್ಧಿಯ ಯಾವ ಹಂತದಲ್ಲಿದೆ ಎಂದು ತಿಳಿಯದೆ, ಮೇಲುನೋಟಕ್ಕೆ ಕಾಣುವುದನ್ನೇ ಭಾರತಕ್ಕೂ ಅನ್ವಯಿಸಲು ಸೂಚಿಸುವುದರಲ್ಲಿ ಸ್ಥಾಪಿತ ಹಿತಾಸಕ್ತಿಗಳ ಸ್ವಾರ್ಥ ಅಡಗಿರುವುದನ್ನು ಮರೆಯಬಾರದು.

ಚೀನಾದಲ್ಲಿ, ಭಾರತದಂತೆ ಉಳುವ ಭೂಮಿ ಕೆಲವೇ ಭೂಮಾಲಕರ ಹಾಗೂ ಶ್ರೀಮಂತ ರೈತರ ಖಾಸಗೀ ಆಸ್ತಿಯಾಗಿ ಕೇಂದ್ರೀಕೃತವಾಗಿ ಉಳಿದಿಲ್ಲ; ವ್ಯಾಪಾರ ಮತ್ತು ಕೈಗಾರಿಕೆಗಳು ಟಾಟಾ, ಬಿರ್ಲಾ, ಮುಂತಾದ ಗುತ್ತೇದಾರಿ ಬಂಡವಾಳಶಾಹಿ ಕುಟುಂಬಗಳ ಖಾಸಗೀ ಆಸ್ತಿಯಾಗಿ ಕೇಂದ್ರೀಕೃತವಾಗಿಲ್ಲ; ವಸತಿಗೃಹಗಳು, ಶಾಲೆ, ಕಾಲೇಜು ಮುಂತಾದ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆ ಮುಂತಾದ ಆರೋಗ್ಯ ಸಂಸ್ಥೆಗಳು, ಮಠ, ಮಸೀದಿ, ಇಗರ್ಜಿಗಳ ಹಾಗೂ ಮತ್ತಿತರ ದಾನಿಗಳ ಧರ್ಮವಂತರ ಖಾಸಗೀ ಆಸ್ತಿಗಳಾಗಿ ಉಳಿದಿಲ್ಲ. ಭಾರತದಂತೆ, ಚೀನಾವು ವಿದೇಶಿ ಸಾಲಕ್ಕೊಳಗಾಗಲಿಲ್ಲ; ವಿದೇಶಿ ಬಂಡವಾಳದ ಶೋಷಣೆಗೂ ಒಳಗಾಗಲಿಲ್ಲ. ಬದಲು, ಚೀನಾದಲ್ಲಿ ವ್ಯವಸಾಯ, ವ್ಯಾಪಾರ, ಕೈಗಾರಿಕೆಗಳು ಅವವುಗಳ ಗುಣಗಾತ್ರಗಳಿಗನುಗುಣವಾಗಿ ಹೆಚ್ಚಾಗಿ ಸಹಕಾರಿ, ಸಮುದಾಯ ಹಾಗೂ ಸರಕಾರಿ ಸಂಸ್ಥೆಗಳ ಮೂಲಕ ನಡೆಸಲ್ಪಡುತ್ತವೆ. ಹಾಗೆಯೇ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಜನಹಿತ ಕಾರ್ಯಗಳು ಸರಕಾರದ ಹೊಣೆಗಾರಿಕೆಯಾಗಿದ್ದು, ಧರ್ಮಸಂಸ್ಥೆಗಳ ಮತ್ತು ದಾನಿಗಳ ಕೃಪಾಕಟಾಕ್ಷದಲ್ಲಿ ಇವುಗಳನ್ನು ಇರಗೊಡುವುದಿಲ್ಲ.

ಚೀನಾದಲ್ಲಿ ಧನಿ-ಒಕ್ಕಲು, ಯಜಮಾನ-ಕೂಲಿ ಎಂಬ ವರ್ಗ ಭೇದವು ಅಳಿದು ಹೋಗಿದೆ. ಅಲ್ಲಿನ ಜನಕೋಟಿ ಎಲ್ಲರೂ ಒಂದೇ ವರ್ಗಕ್ಕೆ-ದುಡಿಯುವ ವರ್ಗಕ್ಕೆ ಸೇರಿದವರು. ಅವರಿಗೆ ಭಾರತದಂತೆ ಕೇವಲ ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳಲ್ಲಿ ಮತ ನೀಡುವ ಹಕ್ಕು ಮಾತ್ರವಲ್ಲದೆ, ಸಮಾಜದ ಎಲ್ಲಾ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಸಂಘಟಿತರಾಗಿ ಸಮಾನ ಅವಕಾಶಗಳನ್ನೂ ಪಡೆಯಲು ಅರ್ಹತೆ ಇದೆ, ಸಾಧ್ಯತೆ ಇದೆ. ಏನು ಉತ್ಪಾದನೆ ಮಾಡಬೇಕು, ಹೇಗೆ ಉತ್ಪಾದನೆ ಮಾಡಬೇಕು, ಎಷ್ಟು ಉತ್ಪಾದನೆ ಮಾಡಬೇಕು, ಪ್ರತಿಯೊಬ್ಬನ ಶ್ರಮಕ್ಕನುಗುಣವಾಗಿ ಹೇಗೆ ನ್ಯಾಯಯುತವಾಗಿ ಉತ್ಪಾದನೆಯ ಪ್ರತಿಫಲವನ್ನು ಹಂಚಬೇಕು ಎಂಬಿತ್ಯಾದಿ ಮೂಲಭೂತ ವಿಷಯಗಳನ್ನು ದುಡಿಯುವ ಜನರೇ ನಿರ್ಧರಿಸುವ ಮೂಲಕ, ಚೀನಾದಲ್ಲಿ ಪ್ರಜಾಪ್ರಭುತ್ವವು ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಭದ್ರ ಬುನಾದಿಯಾಗಿದೆ. ಇಲ್ಲಿ ಎಳೆಯ ಮಕ್ಕಳು ನಿರ್ಗತಿಕರಾಗಿ ಹೊಟ್ಟೆಹೊರೆದುಕೊಳ್ಳಲು ಕೂಲಿಮಾಡಬೇಕಾಗಿಲ್ಲ, ಹೆಣ್ಣುಮಕ್ಕಳು ಮೈಮಾರಿಕೊಳ್ಳಬೇಕಾಗಿಲ್ಲ, ಮುದುಕರು ಕೆಲಸ ಹುಡುಕಬೇಕಾಗಿಲ್ಲ, ಯುವಕರು, ಸಪ್ರಾಯಸ್ಥರು ನಿರುದ್ಯೋಗಿಗಳಾಗಿರಬೇಕಾಗಿಲ್ಲ. ಚೀನಾದ ಸಂವಿಧಾನದಲ್ಲಿ ದುಡಿಯುವ ಹಕ್ಕು ಜನರ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ.

ಚೀನಾದಲ್ಲಿ ಕೃಷಿ ಪ್ರಧಾನವೋ ಕೈಗಾರಿಕೆ ಪ್ರಧಾನವೋ, ಗುಡಿಕೈಗಾರಿಕೆ, ದೊಡ್ಡ ಕೈಗಾರಿಕೆ ಪ್ರಧಾನವೋ ಎಂಬ ವಾದವಿವಾದಗಳು, ಭಾರತದಂತೆ ಶ್ರೀಮಂತ ರೈತರ, ದೊಡ್ಡ ಭೂಮಾಲಕರ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳ ಹಾಗೂ ವಿದೇಶಿ ಬಂಡವಾಳಗಾರರ ನಡುವೆ ಅವರ ಸ್ಥಾಪಿತ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ನಡೆಯುವ ಮುಸುಕಿನೊಳಗಿನ ಗುದ್ದಾಟವಲ್ಲ; ಚುನಾವಣೆಯಲ್ಲಿ ಅಗ್ಗದ ಓಟುಗಿಟ್ಟಿಸಲು ನಡೆಯುವ ಕುತಂತ್ರವಲ್ಲ. ಚೀನಾ

[6ನೇ ಪುಟ ನೋಡಿ]

ದುಡಿಯುವ ಮಹಿಳೆಯರ ಜಾಗತಿಕ ಟ್ರೇಡ್ ಯೂನಿಯನ್ ಸಮ್ಮೇಳನ – ಐಕ್ಯ ಹೋರಾಟಕ್ಕೆ ಕರೆ

ಸೈಪ್ರಸ್‌ನ ರಾಜಧಾನಿ ನಿಕೋಸಿಯಾದಲ್ಲಿ ಕಳೆದ ಅಕ್ಟೋಬರ್ 15 ರಿಂದ 19ರವರೆಗೆ ದುಡಿಯುವ ಮಹಿಳೆಯರ ಸಮಸ್ಯೆಗಳ ಕುರಿತು ನಾಲ್ಕನೇ ಜಾಗತಿಕ ಟ್ರೇಡ್‌ಯೂನಿಯನ್ ಸಮ್ಮೇಳನ ನಡೆಯಿತು. 1978ರಲ್ಲಿ ಪ್ರಾಗ್‌ನಲ್ಲಿ ನಡೆದ ಒಂಭತ್ತನೇ ಜಾಗತಿಕ ಟ್ರೇಡ್‌ಯೂನಿಯನ್ ಕಾಂಗ್ರೆಸ್ (W.F.T.U.) ನೀಡಿದ್ದ ಕರೆಯ ಆಧಾರದ ಮೇಲೆ ಅಂತರಾಷ್ಟ್ರೀಯ ಸಿದ್ಧತಾ ಸಮಿತಿಯಿಂದ ಈ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಸಮ್ಮೇಳನದಲ್ಲಿ ಚರ್ಚಿಸಲ್ಪಟ್ಟ ಮುಖ್ಯ ವಿಷಯ "ಸಮಾಜ, ದುಡಿಮೆ ಮತ್ತು ಕಾರ್ಮಿಕ ಸಂಘಗಳಲ್ಲಿ ಮಹಿಳೆಯರ ಪಾತ್ರ ಹಾಗೂ ಸ್ಥಾನ".

ವಿಶಾಲ ತಳಹದಿಯ ಈ ಸಮ್ಮೇಳನದಲ್ಲಿ ಜಗತ್ತಿನ ಎಲ್ಲಾ ದೇಶಗಳ ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳಿಗೂ ಭಾಗವಹಿಸಲು ಅವಕಾಶ ನೀಡಲಾಗಿತ್ತು. ಸಮ್ಮೇಳನಕ್ಕೆ ಆಮಂತ್ರಿತವಾಗಿದ್ದ ಕಾರ್ಮಿಕ ಸಂಘಟನೆಗಳಲ್ಲಿ ಸಿ. ಐ. ಟಿ. ಯು. ಕೂಡಾ ಸೇರಿದೆ. 85 ದೇಶಗಳಿಗೆ ಸೇರಿದ 106 ರಾಷ್ಟ್ರೀಯ ಟ್ರೇಡ್‌ಯೂನಿಯನ್ ಕೇಂದ್ರ ಸಂಘಟನೆಗಳು, 21 ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ಸಂಘಟನೆಗಳೂ ಸಮ್ಮೇಳನದಲ್ಲಿ ಪಾಲುಗೊಂಡಿದ್ದವು. ಜಪಾನ್, ಅಮೇರಿಕಾ ಸಂಯುಕ್ತ ಸಂಸ್ಥಾನಗಳು, ಬ್ರಿಟನ್, ಫ್ರಾನ್ಸ್, ಇಟಲಿ, ಲ್ಯಾಟಿನ್ ಅಮೇರಿಕಾ, ದಕ್ಷಿಣ ಆಫ್ರಿಕಾ, ವಿಯೆತ್ನಾಂ ಮತ್ತಿತರ ರಾಷ್ಟ್ರಗಳು ಮತ್ತು ಎಲ್ಲಾ ಸಮಾಜವಾದಿ ರಾಷ್ಟ್ರಗಳಿಗೆ ಸೇರಿದ್ದ ಒಟ್ಟು 225 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ತಾ. 15ರ ಅಧಿವೇಶನವು ಆ ದಿನ ಪೂರ್ವಾಹ್ನ ಸಮ್ಮೇಳನದ ಅಧ್ಯಕ್ಷೆ ಹಾಗೂ ಜಾಗತಿಕ ಟ್ರೇಡ್‌ಯೂನಿಯನ್ ಕಾಂಗ್ರೆಸ್‌ನ (W.F.T.U.) ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀಮತಿ ಹಂಝುಲೋವಾ ಅವರ ಭಾಷಣದೊಂದಿಗೆ ಪ್ರಾರಂಭವಾಯಿತು. ಆ ಬಳಿಕ ಸೈಪ್ರಸ್‌ನ ಕಾರ್ಮಿಕ ಸಚಿವ ಹಾಗೂ ಜಾಗತಿಕ ಟ್ರೇಡ್‌ಯೂನಿಯನ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಎನ್ರಿಕ್ ಪಾಸ್ಟೋರಿನೋ ಅವರೂ ಮಾತನಾಡಿದರು.

ಪ್ರತಿನಿಧಿಗಳು :

ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿನಿಧಿಗಳಲ್ಲಿ ಹೆಚ್ಚಿನವರು ಕೈಗಾರಿಕೆ, ಕಚೇರಿ ಮತ್ತಿತರ ಸಂಸ್ಥೆಗಳಲ್ಲಿ ದುಡಿಯುವವರು, ಹಾಗೂ ತಮ್ಮ ದೇಶದ ಟ್ರೇಡ್‌ಯೂನಿಯನ್ ಸಂಘಟನೆಗಳಲ್ಲಿ ಪ್ರಮುಖ ಸ್ಥಾನಗಳನ್ನು ಹೊಂದಿದವರೇ. ಇವರಲ್ಲಿ ಅನೇಕರು ತಮ್ಮ ಕಾರ್ಮಿಕ ಸಂಘಟನೆಗಳ ಮಹಿಳಾ ಸಮಿತಿಗಳಲ್ಲಿ ದುಡಿಯುತ್ತಿದ್ದಾರೆ. ಜಪಾನ್, ಫ್ರಾನ್ಸ್, ಅಂಗೋಲಾ, ಆಸ್ಟ್ರೇಲಿಯಾ, ಚಿಲಿ, ಕೇಪ್‌ವರ್ದಿ, ಬ್ರಿಟನ್, ಮತ್ತಿತರ ಹಲವು ರಾಷ್ಟ್ರಗಳ ಪ್ರತಿನಿಧಿಗಳು ತಮ್ಮ ಸಂಘಗಳ ದುಡಿಯುವ ಮಹಿಳೆಯರ ಸಮಿತಿಗಳ ಪರವಾಗಿಯೇ ಸಮ್ಮೇಳನದಲ್ಲಿ ಹಾಜರಿದ್ದರು.

ಸಮ್ಮೇಳನದಲ್ಲಿ ಪಾಲುಗೊಂಡಿದ್ದ ಇಪ್ಪತ್ತೊಂದು ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ಸಂಘಟನೆಗಳಲ್ಲಿ ಅಂತರಾಷ್ಟ್ರೀಯ ಕಾರ್ಮಿಕ ಸಂಘದ (ILO) ಪ್ರತಿನಿಧಿಗಳು ಚರ್ಚೆಯಲ್ಲಿ ತುಂಬಾ ಮಹತ್ವದಪಾತ್ರವಹಿಸಿದ್ದಾರೆ. ಚರ್ಚೆಯ ವೇಳೆ ಅವರು ಆಗಾಗ್ಗ ಮಧ್ಯೆ ಪ್ರವೇಶಿಸಿ ಅಮೂಲ್ಯ ಸಲಹೆಗಳನ್ನೂ ನೀಡುತ್ತಿದ್ದರು. ಇಂಟರ್‌ನ್ಯಾಶನಲ್ ಕೋ-ಆಪರೇಶನ್ ಆಫ್ ಅರಬ್ ಟ್ರೇಡ್‌ಯೂನಿಯನ್, ಆಫ್ರಿಕನ್ ಟ್ರೇಡ್‌ಯೂನಿಯನ್ ಯುನಿಟಿ, ಸ್ಟಾಂಡಿಂಗ್ ಕಾಂಗ್ರೆಸ್ ಆಫ್‌ಲ್ಯಾಟಿನ್ ಅಮೇರಿಕನ್ ವರ್ಕರ್ಸ್ ಟ್ರೇಡ್‌ಯೂನಿಯನ್ ಯುನಿಟಿ, ಮತ್ತು ಡಬ್ಲ್ಯು. ಎಫ್. ಟಿ. ಯು. ಗೆ ಸೇರ್ಪಡೆಯಾದ ಬಟ್ಟೆಗಿರಣಿ, ಕೃಷಿ, ರಾಸಾಯನಿಕ ಉದ್ಯಮ, ವಾಣಿಜ್ಯ, ಲೋಹ ಉದ್ಯಮ, ಕಟ್ಟಡನಿರ್ಮಾಣ, ಸಾರ್ವಜನಿಕ ಸೇವಾಸಂಸ್ಥೆಗಳು ಇತ್ಯಾದಿಗಳಲ್ಲಿ ದುಡಿಯುವ ನೌಕರರನ್ನೊಳಗೊಂಡ ಟ್ರೇಡ್‌ಯೂನಿಯನ್ ಇಂಟರ್‌ನ್ಯಾಶನಲ್ಸ್‌ನಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಜಾಗತಿಕ ಟ್ರೇಡ್‌ಯೂನಿಯನ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಎನ್ರಿಕ್ ಪಾಸ್ಟೋರಿನೊ ಸಮ್ಮೇಳನಾದ್ಯಂತ ಉಪಸ್ಥಿತರಿದ್ದರು. ಸಮ್ಮೇಳನದ ಮುಕ್ತಾಯ ಅಧಿವೇಶನದಲ್ಲಿ ಟ್ರೇಡ್‌ಯೂನಿಯನ್ ಇಂಟರ್‌ನ್ಯಾಶನಲ್ ಆಫ್ ಎಗ್ರಿಕಲ್ಚರ್, ಫಾರೆಸ್ಟ್ರಿ ಅಂಡ್ ಪ್ಲಾಂಟೇಶನ್ ವರ್ಕರ್ಸ್‌ನ ಪ್ರಧಾನ ಕಾರ್ಯದರ್ಶಿಯವರೂ ಹಾಜರಿದ್ದರು. ಈ ಸಂಘಟನೆಗೆ ಆಲ್ ಇಂಡಿಯಾ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಸೇರ್ಪಡೆಯಾಗಿರುತ್ತದೆ. ಅಂತರಾಷ್ಟ್ರೀಯ ಪ್ರಜಾಸತ್ತಾತ್ಮಕ ವಕೀಲರ ಸಂಘ, ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಸಂಘ, ಅಂತರಾಷ್ಟ್ರೀಯ ಮಹಿಳಾ ಪ್ರಜಾತಾಂತ್ರಿಕ ಫೆಡರೇಶನ್ ಮೊದಲಾದ ಸಂಘಗಳ ಪ್ರತಿನಿಧಿಗಳು ಚರ್ಚೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ವಿಯೆಟ್ನಾಮಿನ ಪರವಾಗಿ ಮ್ಯಾಡಂ ಲು ಥಿ ಮುಯಿ ಮತ್ತು ವಿಯೆಟ್ನಾಮಿ ಮಹಿಳಾ ಕೆಲಸಗಾರರ ಇಲಾಖೆಯ ಮುಖ್ಯಸ್ಥೆ ಇವರಿಬ್ಬರು ಪ್ರತಿನಿಧಿಗಳಾಗಿದ್ದರು. ಶ್ರೀಲಂಕಾದಿಂದ ಅಲ್ಲಿನ ಪ್ಲಾಂಟೇಶನ್ ಕಾರ್ಮಿಕರ ಎರಡು ಸಂಘಟನೆಗಳಿಂದ ಇಬ್ಬರು ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು.

ಹೆಚ್ಚಿನ ಎಲ್ಲಾ ಸಮಾಜವಾದಿ ರಾಷ್ಟ್ರಗಳಲ್ಲಿನ ಟ್ರೇಡ್ ಯೂನಿಯನ್‌ಗಳ ಮಹಿಳಾ ಸಮಿತಿಯ ಸದಸ್ಯರೂ ಸಮ್ಮೇಳನದ ಚರ್ಚೆಯಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸಿದ್ದರು. ಕಾರ್ಮಿಕ ಸಂಘಗಳಲ್ಲಿ ಮಹಿಳೆಯರ ಸ್ಥಾನಮಾನ, ಅಲ್ಲಿನ ಸಮಾಜದಲ್ಲೂ ದುಡಿಮೆಯಲ್ಲೂ ಮಹಿಳೆಯರು ವಹಿಸುತ್ತಿರುವ ಪಾತ್ರದಕುರಿತು ಅವರು ಅಂಕಿಸಂಖ್ಯೆ ಮತ್ತು ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿದರು.

ಭಾರತದ ಪರವಾಗಿ ಎ. ಐ. ಟಿ. ಯು. ಸಿ. ಯ ನಾಲ್ವರು ಪ್ರತಿನಿಧಿಗಳು ಮತ್ತು ಸಿ. ಐ. ಟಿ. ಯು. ನಿಂದ ಒಬ್ಬಳು-ಅಂದರೆ ನಾನೇ ಭಾಗವಹಿಸಿದ್ದೆ.

ಅಧ್ಯಕ್ಷ ಮಂಡಳಿಯನ್ನು ಔಪಚಾರಿಕವಾಗಿ ಆಯ್ಕೆಮಾಡಿದ ಬಳಿಕ ಸಿದ್ಧತಾ ಸಮಿತಿಯು 1) ಸಮಾಜದಲ್ಲಿ ಮತ್ತು ದುಡಿಮೆಯಲ್ಲಿ ಮಹಿಳೆಯರ ಸ್ಥಾನ ಹಾಗೂ ಪಾತ್ರ 2) ಕಾರ್ಮಿಕ ಸಂಘಟನೆಗಳಲ್ಲಿ ಮಹಿಳೆಯರು ಹೊಂದಿರುವ ಸ್ಥಾನ ಮತ್ತು ಅವರು ನಿರ್ವಹಿಸುತ್ತಿರುವ ಪಾತ್ರ, ಮತ್ತು 3) ದುಡಿಯುವ ಮಹಿಳೆ ಮತ್ತು ಶಾಂತಿ ಎಂಬ ಮೂರು ವಿಷಯಗಳ ಮೇಲೆ ನಿರ್ಣಯಗಳನ್ನು ಮಂಡಿಸಿತು. ಪ್ರತಿನಿಧಿಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಅಂತಿಮ ನಿರ್ಣಯಗಳನ್ನು ತಾ. 19 ರಂದು ಸಂಜೆ ಅಂಗೀಕರಿಸಲಾಯಿತು. ಇವುಗಳಲ್ಲದೆ ದುಡಿಯುವ ಮಹಿಳೆಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಟ್ರೇಡ್‌ಯೂನಿಯನ್ ಹಕ್ಕುಗಳೇ ಮೊದಲಾದ ಬೇಡಿಕೆಗಳ ಬಗ್ಗೆ ಎರಡು ಮಹತ್ವಪೂರ್ಣ ಗೊತ್ತುವಳಿಗಳನ್ನೂ ಮುಕ್ತಾಯದ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಹೆಚ್ಚಿನ ಪ್ರತಿನಿಧಿಗಳು ಕಾರ್ಮಿಕ ಕೇಂದ್ರ ಸಂಘಟನೆಗಳಿಂದ ಬಂದಿದ್ದವರಾದ ಕಾರಣ "ಟ್ರೇಡ್‌ಯೂನಿಯನ್‌ಗಳಲ್ಲಿ ಮಹಿಳೆಯರ ಪಾತ್ರ ಮತ್ತು ಸ್ಥಾನ" ಎಂಬ ನಿರ್ಣಯದ ಬಗ್ಗೆ ಚರ್ಚೆ ನಡೆಸಿದ ಎರಡನೆಯ ಗುಂಪಿಗೇ ಹೆಚ್ಚಿನ ಪ್ರಾಶಸ್ತ್ಯ ಸಹಜವಾಗಿಯೇ ಲಭಿಸಿತು.

ವಿಮಲ ರಣದಿವೆ

560 ಮಿಲಿಯ ದುಡಿಯುವ ಮಹಿಳೆಯರು :

ವಿಶ್ವಾದ್ಯಂತ ಈಗ ಸುಮಾರು 560 ಮಿಲಿಯಕ್ಕೂ ಮಿಕ್ಕಿ ದುಡಿಯುವ ಮಹಿಳೆಯರಿದ್ದಾರೆ. ಇದು ಜಗತ್ತಿನ ಉತ್ಪಾದಕ ಶಕ್ತಿಗಳ ಮತ್ತು ಒಟ್ಟು ದುಡಿಯುವ ಜನತೆಯ ಮೂರನೇ ಒಂದಂಶದಷ್ಟಾಗುತ್ತದೆ. ಬೇರೆಬೇರೆ ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಆಧಾರದ ಮೇಲೆ ಈ ದುಡಿಯುವ ಮಹಿಳೆಯರು ಸಮಾಜದಲ್ಲಿ ಹೊಂದಿರುವ ಸ್ಥಾನಮಾನ ಮತ್ತು ಅವರ ಸ್ಥಿತಿಗತಿಗಳು ನಿರ್ಧರಿಸಲ್ಪಡುತ್ತಿವೆ.

ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ದುಡಿಯುವ ಮಹಿಳೆಯರ ಸಮಸ್ಯೆಗಳು ಹೆಚ್ಚು ಕಡಿಮೆ ಒಂದೇ ತೆರನಾಗಿರುತ್ತವೆ ಮತ್ತು ಹಿಂದುಳಿದ ರಾಷ್ಟ್ರಗಳಲ್ಲಂತೂ ಇವು ಇನ್ನಷ್ಟು ಕೆಟ್ಟದಾಗಿರುತ್ತವೆಂಬುದನ್ನು ಎರಡನೇ ಗುಂಪಿನ ಚರ್ಚೆಯಲ್ಲಿ ಭಾಗವಹಿಸಿದ ನಾನು ಕಂಡುಕೊಂಡೆ. ರಾಷ್ಟ್ರಗಳ ಆರ್ಥಿಕ ಚಟುವಟಿಕೆಯಲ್ಲಿ ದುಡಿಯುವ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ ಮತ್ತು ಅರ್ಥ ವ್ಯವಸ್ಥೆಯ ಪ್ರಮುಖ ಅಂಗವಾಗಿದ್ದಾರೆ. ಹಾಗಿದ್ದರೂ ಈ ರಾಷ್ಟ್ರಗಳ ಆರ್ಥಿಕತೆಯಲ್ಲಿ ದುಡಿಯುವ ಮಹಿಳೆಯರ ಪಾತ್ರ ಇನ್ನೂ ಸಾಕಷ್ಟಿಲ್ಲ. ಇಂತಹ ದೇಶಗಳ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಹಾಗೂ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಈ ದೇಶಗಳಲ್ಲಿರುವ ಪ್ರತಿಗಾಮಿ ಚಿಂತನೆಯೇ ಇದಕ್ಕೆ ಕಾರಣ. ಆದಕಾರಣ 'ದುಡಿಯುವ ವರ್ಗ ಮತ್ತು ಶ್ರಮಜೀವಿಗಳ ಕೈಯ್ಯಲ್ಲಿ ಅಧಿಕಾರವಿರುವಂತಹ, ಶೋಷಣೆಯಿಂದ ವಿಮುಕ್ತವಾದ ಸಮಾಜವನ್ನು ರಚಿಸುವವರೆಗೆ ಮಹಿಳೆಯರ ಈಗಿನ ಪರಿಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ' ಎಂಬುದು ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ನೀಡಿದ ಒಮ್ಮತದ ಅಭಿಪ್ರಾಯ. "ಈ ಕಾರಣಕ್ಕಾಗಿಯೇ ಮಹಿಳೆಯರು ತಮ್ಮ ನ್ಯಾಯೋಚಿತ ಬೇಡಿಕೆಗಳ ಈಡೇರಿಕೆಗಾಗಿ, ಸಮಾಜದ ಮೂಲಭೂತ ಆರ್ಥಿಕ ಸಾಮಾಜಿಕ ಬದಲಾವಣೆಗಾಗಿ ಹೋರಾಟದ ಮಾರ್ಗವನ್ನವಲಂಬಿಸಿದ್ದಾರೆ."

ನಮ್ಮ ಗುಂಪಿನ ಚರ್ಚೆಗೆ ಅನುಭವೀ ಟ್ರೇಡ್‌ಯೂನಿಯನ್ ಕಾರ್ಯಕರ್ತೆ ಮತ್ತು ಸಿ. ಜಿ. ಟಿ. ಯ ಕಾರ್ಯದರ್ಶಿನಿಯಾಗಿರುವ ಶ್ರೀಮತಿ ಕ್ರಿಶ್ಚಿಯನ್ ಗಿಲ್ಸ್ ಅಧ್ಯಕ್ಷೆಯಾಗಿದ್ದರು. ಚರ್ಚೆಯನ್ನು ಪ್ರಾರಂಭಿಸುತ್ತಾ ಆಕೆ "ಹಲವಾರು ಎಡರು ತೊಡರುಗಳಿದ್ದರೂ ಟ್ರೇಡ್‌ಯೂನಿಯನ್ ಚಟುವಟಿಕೆಗಳಲ್ಲೂ, ನಿರ್ದಿಷ್ಟ ಬೇಡಿಕೆಗಳ ಈಡೇರಿಕೆಗಾಗಿ ನಡೆಯುವ ಹೋರಾಟಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ದಿನೇದಿನೇ ಹೆಚ್ಚುತ್ತಿದೆ. ಶ್ರಮಶಕ್ತಿ ಮತ್ತು ಬಂಡವಾಳಗಳ ನಡುವೆ ನಿರಂತರ ಸಂಘರ್ಷ ನಡೆಯುತ್ತಿದೆ. ಬಂಡವಾಳಶಾಹಿಯ ದಬ್ಬಾಳಿಕೆಯ ನಡುವೆಯೂ ಕಾರ್ಮಿಕ ಚಳುವಳಿ ದಿನೇ ದಿನೇ ಬಲಶಾಲಿಯಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಬಂಡವಾಳಶಾಹಿ ವ್ಯವಸ್ಥೆ ಮಹಿಳೆಯರಿಗೆ ನೀಡಲು ನಿರಾಕರಿಸಿರುವ ಕನಿಷ್ಠ ಹಕ್ಕುಗಳನ್ನು ಸಮಾಜವಾದಿ ದೇಶಗಳು ಮಾತ್ರ ನೀಡುತ್ತಿವೆ. ಮಹಿಳೆಯರಿಗೆ ಸಂಬಂಧಿಸಿದ ಎಲ್ಲಾ ಕಾನೂನುಗಳನ್ನೂ ಅಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ನಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಮತ್ತು ಸ್ತ್ರೀ, ಪುರುಷರಿಗೆ ನೀಡಲಾಗುತ್ತಿರುವ ವೇತನದಲ್ಲಿನ ತಾರತಮ್ಯವನ್ನು ತೊಲಗಿಸುವುದು ಇತ್ಯಾದಿಗಳೇ ನಮ್ಮ ಮುಖ್ಯ ಉದ್ದೇಶ. ಕಾರ್ಮಿಕ ಸಂಘಟನೆಗಳಲ್ಲಿ ಸ್ತ್ರೀಯರು ಉನ್ನತ ಸ್ಥಾನಗಳಿಗೇಕೆ ಬರುತ್ತಿಲ್ಲವೆಂದು ನಮಗೆ ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಂದು ರಾಷ್ಟ್ರದ ಕಾರ್ಮಿಕ ಸಂಘಟನೆಗಳೂ ಮಹಿಳೆಯರ ವಿರುದ್ಧ ನಡೆಸಲಾಗುತ್ತಿರುವ ಪಕ್ಷಪಾತ ನೀತಿಗಿದಿರಾಗಿ ಹೋರಾಡಬೇಕು" ಎಂಬ ಸ್ಫೂರ್ತಿಯುತ ಮಾತುಗಳನ್ನಾಡಿದರು.

ಹಂಗರಿಯಿಂದ ಬಂದಿದ್ದ ಪ್ರತಿನಿಧಿಯೊಬ್ಬರು ತನ್ನ ದೇಶದ ಮಹಿಳಾ ಕಾರ್ಮಿಕರು ಶಿಕ್ಷಣ, ವೃತ್ತಿತರಬೇತಿ ಮತ್ತಿತರ ಕ್ಷೇತ್ರಗಳಲ್ಲಿ ಎಂತಹ ಅಮೋಘ ಪ್ರಗತಿ ಸಾಧಿಸಿದ್ದಾರೆಂದೂ ತನ್ನ ದೇಶದಲ್ಲಿ ಶಿಶುರಕ್ಷಣಾ ಕೇಂದ್ರಗಳಿರುವ ಕಾರಣ ಹೆಂಗಸರು ರಾಷ್ಟ್ರದ ಪ್ರಗತಿಗಾಗಿ ವಿವಿಧ ರೀತಿಯಲ್ಲಿ ತಮ್ಮ ಕೊಡುಗೆ ನೀಡಲು ಹೇಗೆ ಸಾಧ್ಯವಾಗುತ್ತಿದೆಯೆಂಬುದನ್ನೂ ವಿವರಿಸಿದರು.

ವರ್ಣಭೇದ ಮತ್ತು ತಾರತಮ್ಯ :

ಅದೃಷ್ಟವಶಾತ್ ಚರ್ಚೆಯಲ್ಲಿ ಭಾಗವಹಿಸಿ ಪ್ರಬಂಧ ಓದಿದವರಲ್ಲಿ ನಾನು ಎರಡನೆಯವಳಾಗಿದ್ದೆ.

ಜಿಂಬಾಬ್ವೆಯಿಂದ ಆಗಮಿಸಿದ್ದ ಪ್ರತಿನಿಧಿಯೊಬ್ಬರು ಪಕ್ಷಪಾತ ನಡೆಯುತ್ತಿರುವುದು ಕೇವಲ ಮಹಿಳೆಯರ ವಿರುದ್ಧ ಮಾತ್ರವಲ್ಲ, ಮಹಿಳೆಯರಲ್ಲೂ ವರ್ಣೀಯ ಮಹಿಳೆಯರ ವಿರುದ್ಧ ವಿಶೇಷ ಪಕ್ಷಪಾತ ನಡೆಯುತ್ತಿದೆ ಎಂದರು. ಶ್ವೇತ ವರ್ಣೀಯ ಮಹಿಳೆಯರಿಗೆ ಉದ್ಯೋಗ ಸಿಗುತ್ತಿದೆ, ಆದರೆ ಕರಿಯ ಮಹಿಳೆಯರಿಗೆ ಸಿಗುತ್ತಿಲ್ಲವೆಂದೂ ಆಕೆ ಹೇಳಿದರು.

ಸೈಪ್ರಸ್‌ನ ಮಹಿಳೆಯರಲ್ಲಿ ಶೇಕಡಾ 54 ರಷ್ಟು ಮಂದಿ ದುಡಿಯುವ ಮಹಿಳೆಯರು; ಆದರೆ ಕಾರ್ಮಿಕ ಸಂಘಟನೆಗಳಲ್ಲಿ ಅವರ ಸದಸ್ಯತ್ವ ಕೇವಲ ಶೇ. 18 ರಷ್ಟು ಮಾತ್ರ.

ಸ್ತ್ರೀಯರ ವಿರುದ್ಧ ತಮ್ಮ ದೇಶಗಳಲ್ಲಿ ವೇತನ, ಭಡ್ತಿ, ಸಾಮಾಜಿಕ ಸ್ಥಾನಮಾನ ಹೀಗೆ ಹಲವಾರು ಕ್ಷೇತ್ರ

ಗಳಲ್ಲಿ ಪಕ್ಷಪಾತ ನಡೆಯುತ್ತಿರುವುದನ್ನು ಬೇರೆಬೇರೆ ಭಾಷಣಕಾರರು ವಿವರಿಸಿದರು. ಅಧ್ಯಕ್ಷ ಮಂಡಳಿಯಲ್ಲಿದ್ದ ಗಿನಿ ರಾಷ್ಟ್ರದ ಪ್ರತಿನಿಧಿಯೊಬ್ಬರು, "ವರ್ಣಭೇದ ನೀತಿಯಿಂದಾಗಿ ವಿವಿಧ ರಾಷ್ಟ್ರಗಳಲ್ಲಿ ತೀರಾ ನಾಚುಗೆಗೇಡಿ ಪಕ್ಷಪಾತ ನಡೆಯುತ್ತಿದೆ. ಅದು ಸಮಗ್ರ ಚಳುವಳಿಯಲ್ಲಿ ಒಡಕನ್ನುಂಟು ಮಾಡುತ್ತಿದೆ; ಇದನ್ನು ನಾವು ವಿಶೇಷವಾಗಿ ಗಮನಿಸಬೇಕು" ಎಂದರು. ಕೊಲಂಬಿಯಾದ ಪ್ರತಿನಿಧಿಯಾಗಿ ಬಂದಿದ್ದ ಒಬ್ಬ ತರುಣಿ ತನ್ನ ಸ್ಫೂರ್ತಿದಾಯಕ ಭಾಷಣದಲ್ಲಿ "ಸಮಸ್ಯೆಗಳು ಎಲ್ಲಾ ಕಡೆಗೂ ಒಂದೇ ತೆರನಾಗಿವೆ; ಇವು ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸಿದ ಸಮಸ್ಯೆಗಳು. ಹಣದುಬ್ಬರ ಮಿತಿ ಮೀರಿದೆ; ಜೀವನ ವೆಚ್ಚವನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ನಿರುದ್ಯೋಗ ಉಲ್ಬಣಿಸುತ್ತಿದೆ. ಇದರ ಮೇಲೆ ನಮಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನೂ ಅಲ್ಲಗಳೆಯಲಾಗಿದೆ. ಹೆರಿಗೆ ರಜೆ ನಮ್ಮ ದೇಶದಲ್ಲಿ ಕೇವಲ ಎಂಟುವಾರ ಮಾತ್ರ. ಪ್ರಾಯಶಃ ಇದು ವಿಶ್ವದಲ್ಲೇ ಅತ್ಯಂತ ಕಡಿಮೆ. ನಮ್ಮಲ್ಲಿ ಶಿಶು ಸಂರಕ್ಷಣಾ ಕೇಂದ್ರಗಳಿಲ್ಲ; ಮಕ್ಕಳಿಗಾಗಿ ಶಾಲೆಗಳೂ ಇಲ್ಲ. ವರ್ಷ ವರ್ಷ ಸಾವಿರಾರು ಮಕ್ಕಳು ದುಡಿಮೆಯ ಮಾರುಕಟ್ಟೆಗೆ ಬರುತ್ತಿದ್ದಾರೆ. [illegible]ುವ ಅಪರಾಧಿಗಳ ಗುಂಪುಗಳೂ ಹೆಚ್ಚುತ್ತಿವೆ. ಒಟ್ಟು ಕೆಲಸಗಾರರಲ್ಲಿ ಕೇವಲ ಶೇ. 20 ರಷ್ಟು ಮಾತ್ರ ಕಾರ್ಮಿಕ ಸಂಘಗಳ ಸದಸ್ಯರಿದ್ದಾರೆ. ಇವರಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಇನ್ನೂ ಕಡಿಮೆ. ನಮ್ಮ ದೇಶದಲ್ಲಿ ಮಹಿಳೆಯರಿಗೆ ಸಾಮಾಜಿಕ ಸುರಕ್ಷಿತತೆಯ ಯಾವ ಯೋಜನೆಯೂ ಇಲ್ಲ. ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಸಂಪೂರ್ಣ ದಮನಿಸಲಾಗಿದೆ. ಕಾರ್ಮಿಕ ಮುಂದಾಳುಗಳನ್ನು ಚಿತ್ರಹಿಂಸೆಗೆ ಗುರಿಪಡಿಸಿ ಸೆರೆಮನೆಗೆ ಅಟ್ಟಲಾಗುತ್ತಿದೆ. ಇಂತಹ ಹಲವಾರು ಚಿತ್ರಹಿಂಸಾ ಶಿಬಿರಗಳಲ್ಲಿ ಹೆಂಗಸರನ್ನೂ ಮಕ್ಕಳನ್ನೂ ಕೂಡಿಹಾಕಲಾಗಿದೆ. ಇದೀಗ ನೂರಕ್ಕೂ ಮಿಕ್ಕಿ ಹೆಂಗಸರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಕೊಲಂಬಿಯಾದ ಶ್ರಮಿಕರು ಫ್ಯಾಸಿಸಂನ ವಿರುದ್ಧ ತಮ್ಮ ಹೋರಾಟಕ್ಕೆ ಅಂತಾರಾಷ್ಟ್ರೀಯ ನೆರವನ್ನು ಬೇಡುತ್ತಿದ್ದಾರೆ" ಎಂದರು. ಆಕೆಯ ಭಾಷಣ ಸಭಿಕರಿಂದ ಅಪಾರ ಪ್ರಶಂಸೆ ಗಳಿಸಿತು.

ಜಪಾನಿನ ದುಡಿಯುವ ಮಹಿಳೆಯರ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ವಿವಾಹಿತರೂ, ಅಲ್ಪಕಾಲೀನ ಉದ್ಯೋಗಿಗಳೂ ಸೇರಿ ಅಲ್ಲಿ ಉದ್ಯೋಗದಲ್ಲಿರುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ ನಿಜ. ಆದರೆ ಬಂಡವಾಳಶಾಹಿ ಜಗತ್ತನ್ನು ಕಾಡುತ್ತಿರುವ ಆಳವಾದ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಜಪಾನ್ ಸರಕಾರವು ಮಹಿಳಾ ಕೆಲಸಗಾರರ ಹಕ್ಕುಗಳ ಮೇಲೆ ಆಕ್ರಮಣ ಮಾಡುತ್ತಿದೆ. ಜಪಾನಿನ ವೈಜ್ಞಾನಿಕ, ತಾಂತ್ರಿಕ ಪ್ರಗತಿ ಅಲ್ಲಿನ ದುಡಿಯುವ ಜನತೆಯ ಪಾಲಿಗೊಂದು ಶಾಪವಾಗಿಬಿಟ್ಟಿದೆ. ಉದಾಹರಣೆಗೆ ಕನ್ವೇಯರ್ ಬೆಲ್ಟಿನ ಅಪಾರ ವೇಗಕ್ಕೆ ಸರಿತೂಗಿಸಿಕೊಂಡು ಹೋಗುವುದು ಕಾರ್ಮಿಕರಿಗೆ ಸಾಧ್ಯವಾಗುತ್ತಿಲ್ಲ. ಕಾರ್ಮಿಕರ ಉತ್ಪಾದಕತೆಯನ್ನು ಬಲವಂತವಾಗಿ ಅದೆಷ್ಟು ಹೆಚ್ಚಿಸಲಾಗಿದೆಯೆಂದರೆ ಕೆಲಸಗಾರರಲ್ಲಿ ಸೊಂಟನೋವು, ನರಮಂಡಲದ ರೋಗಗಳು ಮಾನಸಿಕ ಕಾಯಿಲೆಗಳು ಹೆಚ್ಚಾಗುತ್ತಿವೆ. ಮಹಿಳಾ ದುಡಿಮೆಗಾರರಲ್ಲಿ ಗರ್ಭಸ್ರಾವದ ಪ್ರಮಾಣ 54% ರಷ್ಟಾಗಿದೆ. ರಾತ್ರಿ ಪಾಳಿಯಲ್ಲಿ ದುಡಿಯುವವರಲ್ಲಿ ಇದು 84% ರಷ್ಟಿದೆ. ಹೆಂಗಸರ ಮಜೂರಿ ಗಂಡಸರ ವೇತನಕ್ಕಿಂತ 56.% ರಷ್ಟು ಕಡಿಮೆ. ಅಂತರಾಷ್ಟ್ರೀಯ ಕಾರ್ಮಿಕ ಸಂಘ ನೀಡಿರುವ ಯಾವುದೇ ಆದೇಶ ಅಥವಾ ಕಟ್ಟಳೆಗಳನ್ನು ಇಲ್ಲಿ ಪಾಲಿಸಲಾಗುತ್ತಿಲ್ಲ. 'ಮಾತೃತ್ವ'ವು ಸಾಮಾಜಿಕ ಜವಾಬ್ದಾರಿಯಾಗಬೇಕು; ಹಾಗಿದ್ದರೆ ಮಾತ್ರ ಮಹಿಳೆಗೆ ಸ್ವಲ್ಪವಾದರೂ ಸ್ವಾತಂತ್ರ್ಯ ದೊರೆಯುವುದು ಸಾಧ್ಯ"ವೆಂದು ಜಪಾನಿನ ಪ್ರತಿನಿಧಿ ಒತ್ತಿ ಹೇಳಿದರು. "ಕಾರ್ಮಿಕ ಸಂಘಗಳು ಮಹಿಳೆಯರ ಸಮಸ್ಯೆಗಳ ಕಡೆಗೆ ಹೆಚ್ಚಾಗಿ ಗಮನ ಹರಿಸಿದರೆ ಮಾತ್ರ ಪುರುಷ ಹಾಗೂ ಮಹಿಳಾ ದುಡಿಮೆಗಾರರ ನಡುವಿನ ಒಗ್ಗಟ್ಟನ್ನು ಬಲಪಡಿಸಲು ಸಾಧ್ಯವಾದೀತು" ಎಂದೂ ಆಕೆ ಹೇಳಿದರು.

ಆಸ್ಟ್ರೇಲಿಯಾದ ಕೆಲವೆಡೆ ಹೆರಿಗೆರಜೆ ಕೇವಲ ಒಂದುವಾರ ಮಾತ್ರ. ಮಾನಸಿಕ ಒತ್ತಡ ಮತ್ತು ಉಸಿರುಕಟ್ಟಿಸುವ ಜೀವನ ಕ್ರಮದಿಂದಾಗಿ ಅಲ್ಲಿನ ಕೆಲಸಗಾರರಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ನ್ಯೂಜಿಲಂಡ್‌ನಲ್ಲಿ 'ಸಮಾನ ವೇತನ' ಕಾಯ್ದೆಯನ್ನು 1972ರಲ್ಲೇ ಜಾರಿಗೊಳಿಸಲಾಗಿದ್ದರೂ ಅದನ್ನು ಖಾಸಗಿ ಕ್ಷೇತ್ರದಲ್ಲಿ ಮಾತ್ರ ಅನುಷ್ಠಾನಕ್ಕೆ ತರಲಾಗಿದೆ. ಕಳೆದ ಐದು ವರ್ಷಗಳಲ್ಲಿ ಕಾರ್ಮಿಕ ಸಂಘಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ. ಮಹಿಳೆಯರಿಗೆ ಸುಲಭವಾಗಿ ಭಾಗವಹಿಸಲು ಸಾಧ್ಯವಾಗುವಂತೆ ಟ್ರೇಡ್ ಯೂನಿಯನ್ ಸಭೆಗಳ ಸಮಯವನ್ನು ಬದಲಾಯಿಸಬೇಕೆಂಬುದು ಇಲ್ಲಿನ ಮಹಿಳಾ ಕಾರ್ಮಿಕರ ಬೇಡಿಕೆಗಳಲ್ಲಿ ಮುಖ್ಯವಾದುದು.

'ಕೋಸ್ಟಾರಿಕಾ'ದ ಸಮಸ್ಯೆ ಇನ್ನೂ ವಿಶಿಷ್ಟವಾದದ್ದು. ಇಲ್ಲಿ ನಿರುದ್ಯೋಗ ಸಮಸ್ಯೆ ತೀರಾ ಉಲ್ಬಣಗೊಂಡಿರುವ ಕಾರಣ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವೇಶ್ಯಾವೃತ್ತಿಗೆಳೆಯಲ್ಪಡುತ್ತಿದ್ದಾರೆ.

ಬಂಗ್ಲಾದೇಶದ ಎರಡು ಕಾರ್ಮಿಕ ಸಂಘಗಳಾದ-ಬಂಗ್ಲಾದೇಶ್ ಟ್ರೇಡ್ ಯೂನಿಯನ್ ಕೇಂದ್ರ ಮತ್ತು ಜಾತೀಯ ಶ್ರಮಿಕ್ ಲೀಗ್ ಇವುಗಳಿಗೆ ಸೇರಿದ್ದ ಇಬ್ಬರು ಪ್ರತಿನಿಧಿಗಳು ಸಮ್ಮೇಳನಕ್ಕೆ ಬಂದಿದ್ದರು. ಬಂಗ್ಲಾದೇಶ್ ಟ್ರೇಡ್‌ಯೂನಿಯನ್ ಕೇಂದ್ರವು ಇತ್ತೀಚೆಗೆ ದುಡಿಯುವ ಮಹಿಳೆಯರ ಸಮಾವೇಶವನ್ನು ಜರಗಿಸಿತು. ಸಮಾಜದ ಬೇರೆಬೇರೆ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸುಮಾರು 500 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲುಗೊಂಡಿದ್ದರು. ಬಂಗ್ಲಾದೇಶದ ಮಹಿಳೆಯರು ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ ಹೋರಾಡುತ್ತಿದ್ದಾರೆ. ಸಾರಿಗೆಸಮಸ್ಯೆ, ಮಹಿಳೆಯರಿಗಾಗಿ ಹಾಸ್ಟೆಲ್‌ಗಳ ಅಭಾವ ಇತ್ಯಾದಿ ಸಮಸ್ಯೆಗಳು ಬಂಗ್ಲಾದೇಶದಲ್ಲಿ ತೀವ್ರವಾಗಿವೆ ಮಹಿಳೆಯರ ಸಮಸ್ಯೆಗಳ ಬಗ್ಗೆ ಗಮನಹರಿಸಲು ಒಂದು ಪ್ರತ್ಯೇಕ ಸಮಿತಿಯೂ ಇದೆ.

ಚಿಲಿ-ಫ್ಯಾಸಿಸ್ಟ್ ದಬ್ಬಾಳಿಕೆ:

ಸಮ್ಮೇಳನದಲ್ಲಿ ಚಿಲಿಯ ಪ್ರತಿನಿಧಿಯಾಗಿ ಬಂದಿದ್ದ ಯುವತಿಯೊಬ್ಬಳು ಮಾಡಿದ ಭಾಷಣ ಅವಿಸ್ಮರಣೀಯವಾಗಿತ್ತು. ಚಿಲಿಯಲ್ಲಿ ಆಡಳಿತ ನಡೆಸುತ್ತಿರುವ ಫ್ಯಾಸಿಸ್ಟ್ ಶಕ್ತಿಗಳ ನಿಜ ಸ್ವರೂಪವನ್ನು ಆಕೆ ಬಹಿರಂಗಗೊಳಿಸಿದಳು.

"ಚಿಲಿಯಲ್ಲಿ ಗಂಡಸರಿಗಾಗಲೀ ಹೆಂಗಸರಿಗಾಗಲೀ ಉದ್ಯೋಗ ಸಿಗುತ್ತಿಲ್ಲ. ರೈತರಿಗೆ ಭೂಮಿಯಿಲ್ಲ. ಹೆರಿಗೆ ಸೌಲಭ್ಯ ಪಡೆಯುವ ಯಾವಳೇ ಉದ್ಯೋಗಿಯನ್ನಾದರೂ ಕೆಲಸದಿಂದ ವಜಾಗೊಳಿಸಲು ಅವಕಾಶ ಮಾಡಿಕೊಡುವ ಹೊಸ ಕಾಯಿದೆಯೊಂದನ್ನೂ ಜಾರಿಗೆ ತರಲಾಗಿದೆ. ಮಕ್ಕಳನ್ನು ಪಡೆಯುವುದು ನಮ್ಮ ದೇಶದಲ್ಲಿ ಅಪರಾಧವಾಗಿಬಿಟ್ಟಿದೆ. ದುಡಿಮೆಯ ಅವಧಿ ಹದಿನಾಲ್ಕು ಗಂಟೆಗೂ ಮೀರಿದೆ. ಫ್ಯಾಸಿಸಂನ ಪಾಶವೀ ಬಲದ ವಿರುದ್ಧ ನಾವು ಒಗ್ಗಟ್ಟಿನಿಂದ ಹೋರಾಡುತ್ತಿದ್ದೇವೆ. 1978ರ ಮಾರ್ಚ್ 8 ರಂದು 11,000 ಮಹಿಳೆಯರ ಭಾಗವಹಿಸುವಿಕೆಯೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನವನ್ನು ನಾವು ಆಚರಿಸಿದೆವು. ನಾವು ಏರ್ಪಡಿಸಿದ ದುಡಿಯುವ ಮಹಿಳೆಯರ ಸಮಾವೇಶಕ್ಕೆ 300ಕ್ಕೂ ಮಿಕ್ಕಿ ಪ್ರತಿನಿಧಿಗಳು ಆಗಮಿಸಿದರು. ನಾವೇನೂ ಕೈಚೆಲ್ಲಿ ಕುಳಿತಿಲ್ಲ. ಆಳುವವರ ಅತ್ಯಾಚಾರಕ್ಕೆ ನಾವು ಮಣಿಯಲಾರೆವು. ಭೀಕರ ದಬ್ಬಾಳಿಕೆಯ ನಡುವೆಯೂ ನಾವು ಮೇ 1 ರಂದು ಪ್ರದರ್ಶನ ನಡೆಸಿದೆವು; ಉಪವಾಸ ಸತ್ಯಾಗ್ರಹಗಳನ್ನು ನಡೆಸಿದೆವು." ಎಂದ ಆಕೆ ಚಿಲಿಯ ದುಡಿಮೆಗಾರರ ಹೋರಾಟಕ್ಕೆ ಬೆಂಬಲ ಕೋರಿದರು. ಚಿಲಿಯ ಪ್ರತಿನಿಧಿಯ ಭಾಷಣ ಸ್ಫೂರ್ತಿದಾಯಕವಾಗಿರುವಂತೆ ಅಂತಿಮ ವಿಜಯದ ಬಗ್ಗೆ ಆಕೆಯ ಸಂಪೂರ್ಣ ಭರವಸೆ ವ್ಯಕ್ತವಾಗುತ್ತಿತ್ತು. ತನ್ನ ಭಾಷಣದ ಕೊನೆಯಲ್ಲಿ ಆಕೆ ಪಾಬ್ಲೊ ನರೂಡಾ ಅವರ ದೇಶಪ್ರೇಮಿ ಗೀತೆಯೊಂದನ್ನು ಹಾಡಿದಳು.

ಎರಡನೆಯ ಗುಂಪಿನ ಚರ್ಚೆ ಎರಡು ದಿನಗಳ ಕಾಲ ಮುಂದರಿಯಿತು. ಸಿದ್ಧತಾ ಸಮಿತಿ ತಯಾರಿಸಿದ್ದ ನಿರ್ಣಯಕ್ಕೆ ಅನೇಕ ತಿದ್ದುಪಡಿಗಳು ಸೂಚಿಸಲ್ಪಟ್ಟವು. ಈ ಎಲ್ಲ ತಿದ್ದುಪಡಿಗಳನ್ನೂ ಮರುದಿನ ಕರಡು ಸಿದ್ಧಪಡಿಸುವ ಸಮಿತಿ ಪರಿಶೀಲಿಸುವುದೆಂದೂ ಅಂತಿಮ ಠರಾವನ್ನು 19ರ ಬಹಿರಂಗ ಅಧಿವೇಶನದ ಮುಂದಿರಿಸಲಾಗುವುದೆಂದೂ ನಮಗೆ ತಿಳಿಸಲಾಯಿತು.

ಪ್ರಣಾಳಿಕೆ :

ಸಮ್ಮೇಳನ ಅಂಗೀಕರಿಸಿದ ಅಂತಿಮ ಪ್ರಣಾಳಿಕೆ ಈ ಕೆಳಗಿನ ಪ್ರಮುಖ ಬೇಡಿಕೆಗಳನ್ನೊಳಗೊಂಡಿದೆ.

1. ದುಡಿಯುವ ಹಕ್ಕು ಮತ್ತು ಉದ್ಯೋಗ ನೀಡಿಕೆಯನ್ನು ಖಚಿತಗೊಳಿಸಬೇಕು.

2. ದುಡಿಯುವ ಮಹಿಳೆಯರ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಚಲಾಯಿಸಲು ಅನುಕೂಲವಾಗುವಂತೆ ಸಾಮಾಜಿಕ ವ್ಯವಸ್ಥೆಗಳನ್ನು ನಿರೂಪಿಸಬೇಕು.

3. ಮಹಿಳೆಯರ ಹಕ್ಕುಗಳ ಕುರಿತಾದ ಅಂತರಾಷ್ಟ್ರೀಯ ಕಟ್ಟಳೆಗಳನ್ನು ಅಂಗೀಕರಿಸುವುದು ಮತ್ತು ಅದನ್ನು ಸುವ್ಯವಸ್ಥಿತವಾಗಿ ಜಾರಿಗೆ ತರುವುದು.

4. ಹೀಗೆ ಅನುಷ್ಠಾನಕ್ಕೆ ತರದಿರುವ ಕಡೆ ಅದಕ್ಕೆ ಸೂಕ್ತ ಶಿಕ್ಷಾಕ್ರಮಗಳನ್ನು ವಿಧಿಸುವಂತೆ ಮಾಡುವುದು.

5. ವಿವಾಹ, ಹೆರಿಗೆ ಇತ್ಯಾದಿಗಳ ವಿಷಯದಲ್ಲಿ ಮಹಿಳೆಯರುಹಾಗೂ ಹುಡುಗಿಯರ ವಿರುದ್ಧ ತೋರಿಸಲಾಗುತ್ತಿರುವ ತಾರತಮ್ಯವನ್ನು ಕೊನೆಗಾಣಿಸುವುದು ಮತ್ತು ಅವರ ದುಡಿಮೆಯ ಹಕ್ಕನ್ನು ಸುರಕ್ಷಿತಗೊಳಿಸುವುದು ಹಾಗೂ ವಿವಾಹ ಅಥವಾ ಹೆರಿಗೆ ರಜೆಗೆ ಸಂಬಂಧಿಸಿ ಅವರನ್ನು ಕೆಲಸದಿಂದ ಕಿತ್ತುಹಾಕಲಾಗುವುದನ್ನು ತಡೆಯುವುದು.

6. ಶಿಶುಕಲ್ಯಾಣಕ್ಕೆ ಸಂಬಂಧಿಸಿದ ಸವಲತ್ತುಗಳನ್ನು ಒದಗಿಸುವುದು.

7. ಉದ್ಯೋಗ ಸವಲತ್ತುಗಳನ್ನು ನೀಡುವುದು.

8. ಮನೆಕೆಲಸ, ಗೃಹಕೃತ್ಯ ಇತ್ಯಾದಿಗಳಲ್ಲಿ ಉದ್ಯೋಗಿಗಳಾಗಿರುವವರನ್ನೂ ಸೇರಿಸಿ ಎಲ್ಲಾ ಕೆಲಸಗಾರರಿಗೂ ಕನಿಷ್ಠ ವೇತನವನ್ನು ನಿಗದಿ ಮಾಡುವುದು.

9. ಗರ್ಭವತಿಯಾದ ಕೆಲಸಗಾರರನ್ನು ರಾತ್ರಿ ಪಾಳಿಯ ಕೆಲಸದಿಂದಲೂ ಅವರ ಆರೋಗ್ಯಕ್ಕೆ ಹಾನಿಯುಂಟು ಮಾಡಬಹುದಾದ ದುಡಿಮೆಯಿಂದಲೂ ಹೊರತು ಪಡಿಸುವುದು.

10. ಮಹಿಳಾ ಕೆಲಸಗಾರರು, ಗ್ರಾಮೀಣ ಹೆಣ್ಣುಮಕ್ಕಳು ಮತ್ತು ವಲಸೆ ಬಂದಿರುವ ಕೆಲಸಗಾರರನ್ನು ಒಳಗೊಳ್ಳುವಂತೆ ಕಾರ್ಮಿಕ ಕಾಯ್ದೆಗಳ ವ್ಯಾಪ್ತಿಯನ್ನು ವಿಸ್ತಾರಗೊಳಿಸುವುದು.

11. ಮಾತೃತ್ವಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗುವ ಎಲ್ಲಾ ಶಿಕ್ಷಾಕ್ರಮಗಳನ್ನು ರದ್ದುಗೊಳಿಸುವುದು.

12. ಸಮಾಜಕ್ಕೆ ಉಪಯುಕ್ತವಾದ ಮಾತೃತ್ವದ ವಿಶೇಷ ಕರ್ತವ್ಯವು ದುಡಿಯುವ ಮಹಿಳೆಯರಿಗಾಗಿ ವಿಶೇಷ ಹಕ್ಕುಗಳನ್ನು ಬಯಸುತ್ತದೆ. ಇವುಗಳನ್ನು ಪ್ರಭುತ್ವವೂ ಮಾಲೀಕರೂ ಮಾನ್ಯಮಾಡಿ ಅವುಗಳನ್ನು ಕಾಪಾಡಬೇಕು.

13. ಪ್ರಸವಕ್ಕೆ ಮೊದಲು ಮತ್ತು ಪ್ರಸವಾನಂತರ ಕನಿಷ್ಠ ಪಕ್ಷ 12 ವಾರಗಳ ಪೂರ್ಣ ವೇತನ ಸಹಿತ ಹೆರಿಗೆ ರಜೆಯನ್ನು ನೀಡಬೇಕು. ಮತ್ತು ರಜೆ ಕಳೆದ ಮೇಲೆ ಉದ್ಯೋಗಿಯು ತನ್ನ ಸೀನಿಯಾರಿಟಿಗೆಧಕ್ಕೆಯಾಗದಂತೆ ಮರಳಿ ಕೆಲಸಕ್ಕೆ ಹಾಜರಾಗುವ ಹಕ್ಕನ್ನು ಖಚಿತಗೊಳಿಸಬೇಕು.

ಅಂತರಾಷ್ಟ್ರೀಯ ಮತ್ತು ಪ್ರಾದೇಶಿಕ ಟ್ರೇಡ್‌ಯೂನಿಯನ್ ಸಂಘಟನೆಗಳು ಮಹಿಳೆಯರಿಗೆ ದುಡಿಮೆಯಲ್ಲಿ, ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ಸಮಾನ ಹಕ್ಕನ್ನು ಗಳಿಸಿಕೊಳ್ಳುವ ಸಲುವಾಗಿ ಮತ್ತು ದುಡಿಯುವ ಮಹಿಳೆಯ ಹಕ್ಕುಗಳ ರಕ್ಷಣೆಗಾಗಿ ಒಗ್ಗಟ್ಟಿನ ಹೋರಾಟ ನಡೆಸಬೇಕೆಂದೂ ವಿಶೇಷ ಕರೆ ನೀಡಿದೆ.

ಸಮ್ಮೇಳನದ ಯಶಸ್ಸಿಗೆ ಸಮಾಜವಾದಿ ರಾಷ್ಟ್ರಗಳ ಪ್ರತಿನಿಧಿಗಳು ನೀಡಿದ ಕೊಡುಗೆ ಅಮೂಲ್ಯವಾದದ್ದು. ದುಡಿಮೆಯಲ್ಲಿ ಮಹಿಳೆಯರ ಸ್ಥಿತಿಗತಿ ಅತ್ಯುತ್ತಮವಾಗಿರುವುದು ಸಮಾಜವಾದಿ ರಾಷ್ಟ್ರಗಳಲ್ಲಿ ಮಾತ್ರವೆಂಬುದು ಅವರ ಮಾತುಗಳಿಂದ ವ್ಯಕ್ತವಾಗುತಿತ್ತು. ಇದು ಸಮಾಜವಾದಿ ವ್ಯವಸ್ಥೆಯ ಶ್ರೇಷ್ಠತೆಯನ್ನು ತೋರಿಸಿಕೊಡುತ್ತದೆ. ದಕ್ಷಿಣ ಆಫ್ರಿಕಾಖಂಡ, ಏಷ್ಯಾ, ಲ್ಯಾಟಿನ್ ಅಮೇರಿಕಾ ಮುಂತಾದ ಕಡೆ ದುಡಿಯುವ ಮಹಿಳೆಯರ ಪರಿಸ್ಥಿತಿ ಅಸಹನೀಯವಾಗಿರುವುದರ ಹಿನ್ನೆಲೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆದು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸದಿದ್ದಲ್ಲಿ ದುಡಿಯುವ ಮಹಿಳೆಯರ ಸ್ಥಿತಿ ಇನ್ನೂ ಹೀನಾಯವಾಗುತ್ತದೆಂಬುದನ್ನು ಪ್ರತಿನಿಧಿಗಳು ಮನಗಂಡರು.

(ಸಂಗ್ರಹಾನುವಾದ)

○

ಸಂಪು ಮುಕ್ತಾಯ

ಬಿಜಾಪುರ ಜಿಲ್ಲೆಯ ಸಮೀರವಾಡಿ ಸಕ್ಕರೆ ಕಾರ್ಖಾನೆ ಕೆಲಸಗಾರರ 108 ದಿವಸದ ಮುಷ್ಕರ ತಾ. 19 ರಂದು ಮುಕ್ತಾಯವಾಯಿತು. ಪಾಟೀಲಕಮಿಟಿ ಶಿಫಾರಸಿನಂತೆ ಹೆಚ್ಚಿನ ವೇತನವನ್ನು ಒಂದೇ ಕಂತಿನಲ್ಲಿ ಕೊಡಲಾಗುವುದೆಂದೂ, 24 ಬೇಡಿಕೆಗಳ ಕುರಿತಾದ ಒಪ್ಪಂದವನ್ನು ಜಾರಿಯಲ್ಲಿ ತರಲಾಗುವುದೆಂದೂ, ಸದ್ಯ ಒಂದು ತಿಂಗಳ ಮುಷ್ಕರ ಕಾಲದ ಸಂಬಳ ಕೊಡಲಾಗುವುದೆಂದೂ, ಮುಷ್ಕರ ಸಮಯದ ಹೆಚ್ಚಿನ ಸಂಬಳ ಹಾಗೂ ಇತರ ಸಮಸ್ಯೆಗಳನ್ನು ಯೂನಿಯನ್‌ಅಧ್ಯಕ್ಷ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಕೂಡಿ ಬಗೆಹರಿಸಬೇಕೆಂದೂ ಒಪ್ಪಂದವಾಯಿತು. ಈ ಒಪ್ಪಂದದ ತರುವಾಯ ಯೂನಿಯನ್ ಕಾರ್ಯದರ್ಶಿ ಹನುಮಂತಪ್ಪ ಹೆಗ್ಗಳಗಿಯವರು ತಮ್ಮ 13 ದಿವಸದ ಉಪವಾಸ ಸತ್ಯಾಗ್ರಹ ಮುಕ್ತಾಯಗೊಳಿಸಿದರು. ಇಂಥ ಸುದೀರ್ಘ ಹೋರಾಟದ ಯಶಸ್ಸಿಗಾಗಿ ಸಿ.ಐ.ಟಿ.ಯು. ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ಕೆಲಸಗಾರರನ್ನು ಅಭಿನಂದಿಸಿದ್ ದಾರೆ.

●

ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

ದಲ್ಲಿ ಇಂತಹ ಮೂಲಭೂತವಾದ ಸಮಸ್ಯೆಗಳು ದುಡಿಯುವ ವರ್ಗದ ಎಲ್ಲಾ ಸಂಘಟನೆಗಳಲ್ಲಿಯೂ ಚರ್ಚಿಸಲ್ಪಟ್ಟು ಅವವುಗಳ ಪ್ರಾಮುಖ್ಯತೆಯನ್ನು ರಾಷ್ಟ್ರೀಯ ಆರ್ಥಿಕ ಯೋಜನೆಗಳಲ್ಲಿ ಒಂದಕ್ಕೊಂದು ವಿರುದ್ಧವಾಗಿರದೆ ಪರಸ್ಪರ ಪೂರಕವಾಗಿಯೇ ನಿರ್ಧರಿಸಲಾಗುವುದು.

ಭೂಮಾಲಕ ಪದ್ಧತಿ ರದ್ದುಗೊಂಡು, ಸಹಕಾರಿ, ಸಮುದಾಯ ಮತ್ತು ಸರಕಾರಿ ಸಂಸ್ಥೆಗಳಿಂದ ನಡೆಸುವ ವ್ಯವಸಾಯದಿಂದ ಅತ್ಯಧಿಕ ಕೃಷಿ ಉತ್ಪಾದನೆಯಾಗುವುದು, ಗ್ರಾಮೀಣ ಜನರ ಗ್ರಾಹಕ ಶಕ್ತಿ ಹೆಚ್ಚುವುದು, ಕೈಗಾರಿಕೆಗಳಿಗೆ ಅತ್ಯಗತ್ಯವಾದ ಕಚ್ಚಾ ವಸ್ತುಗಳು ಧಾರಳವಾಗಿ ಸಿಗುವುವು. ಮುಖ್ಯವಾಗಿ ಕೈಗಾರಿಕಾ ಉತ್ಪಾದನೆಗಳಿಗೆ ಬೃಹತ್ ಗ್ರಾಮೀಣ ಆಂತರಿಕ ಮಾರುಕಟ್ಟೆಯೂ ಲಭಿಸುವುದು. ಪಾಳೆಯಗಾರಿ ಪದ್ಧತಿಯ ಭೂಸಂಬಂಧದ ರದ್ದತಿಯಿಂದ, ಸಮಾಜವಾದಿ ಪದ್ಧತಿಯ ವ್ಯವಸಾಯದಿಂದ ಗ್ರಾಮೀಣ ಜನರು ವ್ಯವಸಾಯೇತರವಾದ ಗುಡಿ ಕೈಗಾರಿಕೆ ಮತ್ತು ಸಣ್ಣ ಹಾಗೂ ಮಧ್ಯಮ ಉಧ್ಯಮಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗುವರು. ದೈನಂದಿನದ ಜೀವನಾವಶ್ಯಕ ವಸ್ತುಗಳನ್ನು ಈ ಕೈಗಾರಿಕೆಗಳಿಂದಲೇ ಹೆಚ್ಚಾಗಿ ಉತ್ಪಾದಿಸುವರು. ಜನರೆಲ್ಲರೂ ಉದ್ಯೋಗಿಗಳಾಗಿರುವುದರಿಂದ, ಕೃಷಿ ಮತ್ತು ಕೈಗಾರಿಕೆಗಳಲ್ಲಿ ಅಧಿಕ ಉತ್ಪಾದನೆಯಾಗುವುದರಿಂದ, ಬೃಹತ್ ಕೈಗಾರಿಕೆಗಳಿಗೆ ಅಗತ್ಯವಿರುವ ಬಂಡವಾಳ ಸಂಗ್ರಹಣೆಯಾಗುವುದು. ಹೆಚ್ಚುವರಿ ಉತ್ಪಾದನೆಯನ್ನು ರಫ್ತುಮಾಡಿಯೂ ವಿದೇಶಿವಿನಿಮಯಗಳಿಕೆಯಿಂದ ಬಂಡವಾಳ ಸಂಗ್ರಹಿಸಲಾಗುವುದು. ಬೃಹತ್ ಉದ್ಯಮಗಳು ಖಾಸಗೀ ಬಂಡವಾಳಶಾಹಿಗಳ ಕಪಿಮುಷ್ಠಿಯಲ್ಲಿರದೆ, ಸಹಕಾರಿ ಮತ್ತು ಸರಕಾರಿ ಕ್ಷೇತ್ರಗಳಲ್ಲಿದ್ದು, ಕೃಷಿಕ್ಷೇತ್ರಕ್ಕೂ ಗುಡಿ ಕೈಗಾರಿಕೆ ಹಾಗೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೂ ಮತ್ತಷ್ಟೂ ಪ್ರಚೋದನೆ ನೀಡುವುವು. ಈ ಕ್ಷೇತ್ರಗಳಿಗೆ ವಿದ್ಯುತ್, ನೀರಾವರಿ, ಯಂತ್ರೋಪಕರಣ, ರಸಗೊಬ್ಬರ ಮುಂತಾದ ಮೂಲಭೂತವಾದ ಅಗತ್ಯತೆಗಳನ್ನು ಬೃಹತ್ ಪ್ರಮಾಣದಲ್ಲಿ ಪೂರೈಸುವುವು. ಪುನಃ ಕೃಷಿಕ್ಷೇತ್ರದ ಅಭಿವೃದ್ಧಿಯಿಂದಾಗಿ, ಗುಡಿಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು, ಬೃಹತ್ ಕೈಗಾರಿಕೆಗಳು ಪರಸ್ಪರ ಪೂರಕವಾಗಿ ಅಭಿವೃದ್ಧಿ ಹೊಂದುವುವು.

ಆರ್ಥಿಕ ಅಭಿವೃದ್ಧಿಯು ಮುಂದುವರಿಯುತ್ತಿದ್ದಂತೆ, ಗುಡಿಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳಂತಹ ಸಣ್ಣ ಪ್ರಮಾಣದ ಉತ್ಪಾದನಾ ವಿಧಾನಗಳು ಕಡಿಮೆಯಾಗುತ್ತಾ, ಬೃಹತ್ ಉದ್ಯಮಗಳು ಬೆಳೆಯುತ್ತಾ ಹೋಗುವುವು. ಕೃಷಿಕ್ಷೇತ್ರವೂ ಯಂತ್ರೋಪಕರಣಗಳನ್ನು ಹೆಚ್ಚುಹೆಚ್ಚು ಬಳಸುವುದರಿಂದ ಆಧುನೀಕರಿಸಲ್ಪಡುವುದು. ಸಮಾಜವಾದಿ ಪದ್ಧತಿಯ ಇಂತಹ ಆರ್ಥಿಕ ಪ್ರಗತಿಯಿಂದಾಗಿ ಕ್ರಮೇಣ ಕೃಷಿಮತ್ತು ಕೈಗಾರಿಕೆಗಳಿಗೂ, ಹಳ್ಳಿ ಮತ್ತು ಪಟ್ಟಣಗಳಿಗೂ ಇರುವ ವ್ಯತ್ಯಾಸ ಹಾಗೂ ಅಂತರಗಳು ಕಡಿಮೆಯಾಗುವುವು. ಜನರ ಶ್ರಮಭಾರವು ಕಡಿಮೆಯಾಗುವುದು. ಉತ್ಪಾದನೆ ಹೆಚ್ಚುವುದು, ಜೀವನಮಟ್ಟ ಹೆಚ್ಚುವುದು, ವಿಜ್ಞಾನ, ತಂತ್ರಜ್ಞಾನ, ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚಾಗುವುವು.

ಮೂವತ್ತು ವರುಷಗಳ ಸಮಾಜವಾದಿ ಅಭಿವೃದ್ಧಿಯ ಆಧಾರದ ಮೇಲೆ ಇಂದು ಚೀನಾ ತನ್ನ ಕೃಷಿ, ಕೈಗಾರಿಕೆ, ಶಿಕ್ಷಣ ಹಾಗೂ ಮಿಲಿಟರಿಗಳನ್ನು ಆಧುನೀಕರಣಗೊಳಿಸಲುನಿರ್ಧರಿಸಿದೆ. ಇದಕ್ಕೆ ಪೂರ್ವಭಾವಿಯಾಗಿ 1977 ಮತ್ತು 1978ರಲ್ಲಿ ಚೀನಾದ ಸುಮಾರು 2000 ತಂತ್ರಜ್ಞರು, ವಿವಿಧ ವಿಭಾಗಗಳಲ್ಲಿನ ವಿಶೇಷ ತಜ್ಞರು, ಅಧಿಕಾರಿಗಳು ಯೂರೋಪು, ಅಮೇರಿಕ, ಜಪಾನು ಮುಂತಾದ ರಾಷ್ಟ್ರಗಳನ್ನು ವ್ಯಾಪಕವಾಗಿ ಸಂಚರಿಸಿದರು. ಹೊಸ ತಂತ್ರಜ್ಞಾನದ ಕುರಿತು ಆಧುನಿಕ ಉತ್ಪಾದನಾ ಸಾಧನ ವಿಧಾನಗಳ ಕುರಿತು ವಿದೇಶಿ ಪರಿಣತರೊಂದಿಗೆ ವಿಚಾರ ವಿನಿಮಯ ಮಾಡಿದರು, ಹೊಸ ತಾಂತ್ರಿಕ ಸಹಕಾರಗಳ ಕುರಿತು ಒಪ್ಪಂದಗಳ ಸಾಧ್ಯತೆಯ ಕುರಿತು ಆಳವಾಗಿ ಅಧ್ಯಯನ ನಡೆಸಿದರು. ಪರಿಣಾಮವಾಗಿ, ಈಗ ಚೀನಾದ ಸಾವಿರಾರು ಪರಿಣತರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವಿಶೇಷ ಅಧ್ಯಯನಗಳಲ್ಲಿ ತೊಡಗಿದ್ದಾರೆ. ಭಾರತವೂ ಸೇರಿದಂತೆ, ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿಶೇಷ ತಜ್ಞರು ಸ್ವದೇಶದಲ್ಲಿ ಅಥವಾ ವಿದೇಶಗಳಲ್ಲಿ ತಮ್ಮ ಅಧ್ಯಯನ ಮುಗಿದೊಡನೆ ಹೆಚ್ಚಾಗಿ ವಿದೇಶಗಳಲ್ಲಿಯೇ ಅನುಕೂಲಕರವಾದ ಉದ್ಯೋಗಗಳನ್ನು ಆರಿಸಿಕೊಂಡು ವಲಸೆ ಹೋಗುತ್ತಾರೆ. ಆದರೆ, ಚೀನಾ ಇದಕ್ಕೊಂದು ಅಪವಾದ! ಚೀನಾದ ವಿಶೇಷ ತಜ್ಞರು ವಿದೇಶಗಳಲ್ಲಿ ತಮ್ಮ ಅಧ್ಯಯನ ಮುಗಿಸಿಕೊಂಡು ತಮ್ಮ ತಾಯ್ನಾಡಿಗೆ ಮರಳಲಿರುವರು. ಕಾರಣ, 1985 ರಷ್ಟರಲ್ಲಿ ಚೀನಾ 8,00,000 ಹೊಸ ವಿಶೇಷ ತಜ್ಞರನ್ನು ತರಬೇತುಗೊಳಿಸುವ ಗುರಿಯನ್ನಿಟ್ಟುಕೊಂಡಿದೆ!

ಈ ಹಿನ್ನೆಲೆಯಲ್ಲಿ ಚೀನಾ ತನ್ನ ವಿದೇಶಿ ವ್ಯಾಪಾರವನ್ನು ಹೆಚ್ಚಿಸಲು ಬಯಸಿರುವುದು. ವಿದೇಶಿ ಬಂಡವಾಳ ಮತ್ತು ಸಾಲ ಹಾಗೂ ತಂತ್ರಜ್ಞಾನಗಳನ್ನು ಸ್ವಾಗತಿಸುವುದು ಮತ್ತು ತನ್ನ ಆಂತರಿಕ ಮಾರುಕಟ್ಟೆಯನ್ನೂ ಸ್ವಲ್ಪಮಟ್ಟಿಗೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ತೆರೆದಿಡಲು ನಿರ್ಧರಿಸಿರುವುದು. ಅದು ಈಗಾಗಲೇ ಪ್ರಬಲ ರಾಷ್ಟ್ರವಾಗಿದ್ದು, ಅನತಿಕಾಲದಲ್ಲಿಯೇ ಒಂದು ಬಲಿಷ್ಟ ಕೈಗಾರಿಕಾ ರಾಷ್ಟ್ರವಾಗಲು ಮತ್ತು ಮಿಲಿಟರಿ ಶಕ್ತಿಯಾಗಲು ಉದ್ದೇಶಿಸಿದೆ. ವಿದೇಶಿ ಸಾಲ, ಬಂಡವಾಳ, ತಂತ್ರಜ್ಞಾನ ಮತ್ತು ವ್ಯಾಪಾರಗಳಲ್ಲಿ ಚೀನಾ ತನ್ನದೇ ಆದ ಬೆಲೆಗಳನ್ನೂ ಶರತ್ತುಗಳನ್ನೂ ನಿರ್ಧರಿಸಲು ಶಕ್ತವಾಗಿದೆ. ಚೀನಾದೊಂದಿಗೆ ಆರ್ಥಿಕ ಸಂಬಂಧಗಳನ್ನಿರಿಸಲು ತಾನು ಮುಂದೆ ತಾನು ಮುಂದೆ ಎಂದು ಎಲ್ಲಾ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ತೀವ್ರ ಪೈಪೋಟಿ ನಡೆಸುತ್ತಿವೆ. ಅದು ತನ್ನ ಆಂತರಿಕ ಮಾರುಕಟ್ಟೆಯನ್ನು ತೃಪ್ತಿಕರವಾಗಿ ಪೂರೈಸಿ ಹೆಚ್ಚುವರಿಯನ್ನಷ್ಟೇ ರಫ್ತು ಮಾಡುವುದು ಆಂತರಿಕ ಮಾರುಕಟ್ಟೆಯನ್ನು ಇನ್ನಷ್ಟು ಹೆಚ್ಚಿಸಲು, ದುಡಿಯುವ ಜನತೆಯ ಗ್ರಾಹಕ ಶಕ್ತಿಯನ್ನು ಹೆಚ್ಚಿಸಲು ಕಾರ್ಮಿಕರ ವೇತನವನ್ನು ಹೆಚ್ಚಿಸುತ್ತಲೇ ಇದೆ ಮತ್ತು ಬೆಲೆಗಳನ್ನು ಸ್ಥಿರವಾಗಿಯೇ ಇಟ್ಟಿದೆ. ಕೃಷಿ ಉತ್ಪನ್ನ ಹೆಚ್ಚಿಸಲು ರೈತರಿಗೆ ಆಕರ್ಷಕ ಬೆಲೆಗಳನ್ನು ಕೊಡುತ್ತಿದೆ. ಪೇಟೆಪಟ್ಟಣಗಳಲ್ಲಿನ ಕಾರ್ಮಿಕರಿಗೆ ಆಹಾರ ಧಾನ್ಯಗಳನ್ನೂ ಜೀವನಾವಶ್ಯಕ ವಸ್ತುಗಳನ್ನೂ ಸುಲಭ ಬೆಲೆಗಳಲ್ಲಿ ಒದಗಿಸುತ್ತಿದೆ.

ಭಾರತ ನಡೆದು ಬಂದ ದಾರಿ :

ಭಾರತದಲ್ಲಿ ಎಲ್ಲವೂ ತದ್ವಿರುದ್ಧ. ವ್ಯವಸಾಯ ಭೂಮಿ, ಕೈಗಾರಿಕೆ, ವಾಪಾರೋದ್ಯಮ, ಇತ್ಯಾದಿಗಳು ಖಾಸಗೀ ಸ್ವಾಮ್ಯದಲ್ಲಿಯೇ ಕೇಂದ್ರೀಕೃತವಾಗಿರುವುದರಿಂದ, ಸಂಪತ್ತು ಮತ್ತು ಆದಾಯಗಳ ಕೇಂದ್ರೀಕರಣವೂ ಆಗುತ್ತಿದೆ. ಪರಿಣಾಮವಾಗಿ ಅಸಮಾನತೆ, ಬಡತನ, ನಿರುದ್ಯೋಗ, ಬೆಲೆ ಏರಿಕೆಗಳುಂಟಾಗಿ, ಜನಕೋಟಿಯ ಗ್ರಾಹಕಶಕ್ತಿಯು ಕ್ಷಯಿಸುತ್ತಿದೆ. ಕಾರ್ಮಿಕರ ವೇತನ ಹೆಚ್ಚಿಸುವ ಬದಲು ಸರಕಾರದ ಶ್ರಮವೆಲ್ಲಾ ಅವರ ವೇತನ ಕಡಿತಗೊಳಿಸುವುದರಲ್ಲಿ. ಸ್ಥಗಿತಗೊಳಿಸುವುದರಲ್ಲಿ ವ್ಯಯವಾಗುತ್ತಿದೆ. ರೈತರ ಫಸಲಿಗೂ ಯೋಗ್ಯ ಬೆಲೆಸಿಗುತ್ತಿಲ್ಲ. ಹೀಗಾಗಿ ಆಂತರಿಕ ಮಾರುಕಟ್ಟೆ ಬರಿದಾಗುತ್ತಿದೆ. ವ್ಯಾಪಾರೋದ್ಯಮಿಗಳು ತಮ್ಮ ಲಾಭವನ್ನು ಹುಡುಕುತ್ತಾ ವಿದೇಶಿ ಮಾರುಕಟ್ಟೆಗಳಿಗಿಳಿಯುತ್ತಾರೆ. ಅಲ್ಲಿ ಜಾಗತಿಕ ಪೈಪೋಟಿಯನ್ನು ಇದಿರಿಸಲಾರದೆ, ಸರಕಾರದಿಂದ ಸಹಾಯಧನ ಗಿಟ್ಟಿಸುತ್ತಾರೆ. ಅದರ ಭಾರವೂ ಬಡಜನತೆಯ ಮೇಲೆ ಕರಕಂದಾಯಗಳ ರೂಪದಲ್ಲಿ ಬೀಳುತ್ತಿದೆ. ಭಾರತದ ಆಮುದು, ವಿದೇಶಿಸಾಲ, ಬಂಡವಾಳ, ತಂತ್ರಜ್ಞಾನ, ನೆರವುಗಳು ವಿದೇಶಿಯರ ಲಾಭಕ್ಕಾಗಿಯೇ ಹೊರತು, ಭಾರತ ಒಂದು ಬಲಿಷ್ಟ ಕೈಗಾರಿಕಾ ರಾಷ್ಟ್ರವಾಗಬೇಕೆಂದಲ್ಲ. ಭಾರತ ಕೃಷಿಗೇ ಹೆಚ್ಚು ಪ್ರಾಧಾನ್ಯತೆ ಕೊಡಬೇಕೆಂಬ ವಿಶ್ವಬ್ಯಾಂಕಿನ ಸಲಹೆಯೂ ಈ ದೇಶವನ್ನು ಅಮೇರಿಕ, ಪ. ಯೂರೋಪ್, ಜಪಾನು ಮುಂತಾದ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹೊಸ ವಸಾಹತುಗಳನ್ನಾಗಿ ಮಾಡಿಕೊಳ್ಳುವ ದುರುದ್ದೇಶವೇ ಆಗಿದೆ. ಭಾರತ ಮೂವತ್ತು ವರುಷಗಳ ಕಾಂಗ್ರೆಸ್ಸು ಮತ್ತು ಮೂವತ್ತು ತಿಂಗಳುಗಳ ಜನತಾ ಆಡಳಿತಗಳಿಂದ, ಬಂಡವಾಳಶಾಹಿ ಆರ್ಥಿಕ ಪದ್ಧತಿಯಿಂದ ತೀವ್ರ ಆರ್ಥಿಕ ರಾಜಕೀಯ ದುಃಸ್ಥಿತಿಗೊಳಗಾಗಿದ್ದು. ವಿದೇಶಿಸಾಲ, ಬಂಡವಾಳ, ತಂತ್ರಜ್ಞಾನ, ವ್ಯಾಪಾರಗಳಲ್ಲಿ ತನ್ನದೇ ಆದ ಶರತ್ತುಗಳನ್ನು ಹೇರಲು ಅಸಮರ್ಥವಾಗಿದೆ.

ಚೀನಾದ ಅದ್ಭುತ ಆರ್ಥಿಕ ಪ್ರಗತಿ, ಮುಂದೆ ಅದೊಂದು ಬಲಿಷ್ಟ ಕೈಗಾರಿಕಾ ಹಾಗೂ ಮಿಲಿಟರಿ ರಾಷ್ಟ್ರವಾಗಲಿರುವುದು ಭಾರತಕ್ಕೊಂದು ದೊಡ್ಡ ಸವಾಲು. ಭಾರತ ಚೀನಾದಮೇಲ್ನೋಟದ ಕೆಲವೊಂದು ಧೋರಣೆಗಳನ್ನು ಅನುಸರಿಸುವುದನ್ನು ಬಿಟ್ಟು ಅದು ಮೂವತ್ತು ವರುಷಗಳಿಂದ ನಡೆದು ಬಂದ ದಾರಿಯನ್ನು ಗಮನಿಸಿ ತನ್ನ ಆರ್ಥಿಕ ಧೋರಣೆಯನ್ನು ಸೂಕ್ತವಾಗಿ ಬದಲಾಯಿಸುವ ಕಾಲ ಸಮೀಪಿಸಿದೆ.

●

ಕಾಫಿ ಕ್ಯೂರಿಂಗ್ ಕಾರ್ಮಿಕರ ಬವಣೆ

ಎರಡು ವರ್ಷಗಳ ಹಿಂದೆ ಅಂದರೆ 1978 ಮಾರ್ಚ್ ತಿಂಗಳಲ್ಲಿ ಸ್ಥಳೀಯ ಕಾಫಿ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕ ನೌಕರರು 9 ದಿನಗಳ ಮುಷ್ಕರ ನಡೆಸಿದರ ಪರಿಣಾಮ ತಿಂಗಳೊಂದಕ್ಕೆ ಮಾಸಿಕ ವೇತನ ಪಡೆಯುವ ನೌಕರನಿಗೆ ರೂ. 35 ರಂತೆ ತಿಂಗಳೊಂದಕ್ಕೆ ತಾತ್ಕಾಲಿಕ ಪರಿಹಾರ, ಕಾಫಿ ಸಂಸ್ಕರಣ ಮಾಡುವ ಮಹಿಳಾ ಕಾರ್ಮಿಕಳಿಗೆ ದಿನ ಒಂದಕ್ಕೆ ಒಂದು ಕೆ. ಜಿ. ಸಂಸ್ಕರಣ ಮಾಡಿದರೆ ಶೇಕಡ 25 ರಷ್ಟು ಮತ್ತು ದಿನ ಕೂಲಿ ಕಾರ್ಮಿಕನಿಗೆ ದಿನ ಒಂದಕ್ಕೆ 50 ಪೈಸೆಯಂತೆ ತಾತ್ಕಾಲಿಕ ಪರಿಹಾರ ಕೊಡುವುದಾಗಿ ಮೇಲ್ಕಂಡ ಸಂಘಕ್ಕೂ ಮತ್ತು ಆಡಳಿತ ಮಂಡಳಿಗಳಿಗೂ ಒಪ್ಪಂದವಾಯಿತು. ಮಧ್ಯಂತರ ಪರಿಹಾರವು,ಸಂಬಳದಲ್ಲಿ ಅಥವಾ ಕೂಲಿಯಲ್ಲಿ ಬಡ್ತಿಯಾಗಿರದೆ, ಬೋನಸು, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ ಇತ್ಯಾದಿಸವಲತ್ತುಗಳುಸೇರಿರದೆ ಕೇವಲ ತಾತ್ಕಾಲಿಕ ಪರಿಹಾರವಾಗಿದೆ.

ಈ ಪರಿಹಾರದಿಂದ ಕಾರ್ಮಿಕ ನೌಕರರಿಗೆ 1978ರ ಮಾರ್ಚ್ ತಿಂಗಳಲ್ಲಿ ಸ್ವಲ್ಪಮಟ್ಟಿಗೆ ಉಪಯೋಗವಾಗದಂತೆ ಕಂಡರೂ, ಕಾಲಕ್ರಮೇಣ ದಿನಬಳಕೆಯ ಬೆಲೆಗಳು ಏರುತ್ತಾ ಹೋದಂತೆ ಈ ಪರಿಹಾರದಿಂದ ಯಾವ ಪ್ರಯೋಜನವೂ ಸಿಗದಂತಾಯಿತು. 1978 ರ ನಂತರ ಕಾಫಿ ಕ್ಯೂರಿಂಗ್ ಕಾರ್ಮಿಕ ನೌಕರರ ಕೂಲಿ ಮತ್ತು ಸಂಬಳ ಹೆಚ್ಚಿಸಲು ಆಜ್ಞೆ ಹೊರಡಿಸಬೇಕೆಂದು ಪೋಸ್ಟ್ ಕಾರ್ಡುಗಳ ಮೂಲಕ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕ ನೌಕರರು, ಕಾರ್ಮಿಕ ಮಂತ್ರಿಯನ್ನು ನೇರವಾಗಿ ಕೇಳಿಕೊಂಡರು.

ಸಂಘದಿಂದ ಮತ್ತು ಕಾರ್ಮಿಕರಿಂದ ಮಂತ್ರಿಗಳಿಗೆ ಅನೇಕ ಸಾರಿ ಮನವಿ ಸಲ್ಲಿಸಿ ಕೂಲಿ ಮತ್ತು ಸಂಬಳ ಹೆಚ್ಚಳಕ್ಕೆ ಆಜ್ಞೆ ಹೊರಡಿಸಬೇಕೆಂದು ಕೇಳಿಕೊಂಡರೂ ಇವುಗಳಿಂದ ಈ ವರೆವಿಗೂ ಯಾವ ಉಪಯೋಗವೂ ಆಗಿಲ್ಲ.

ಇದೇ ಸಂದರ್ಭದಲ್ಲಿ ಕಾಫಿ ತೋಟಗಳಲ್ಲಿ ದುಡಿಯುವ ಕಾರ್ಮಿಕರಿಗೆ ದಿನ ಒಂದಕ್ಕೆ ರೂ 7-05 ರಂತೆ ಸಂಬಳ ಕೊಡಲು ಇತ್ತೀಚೆಗೆ ತೋಟ ಮಾಲಿಕರ ಮತ್ತು ಕಾರ್ಮಿಕ ಸಂಘಗಳ ಮಧ್ಯೆ ಒಪ್ಪಂದವಾಯಿತು. ಆದರೆ ಕಾಫಿ ಕ್ಯೂರಿಂಗ್ ಸಂಸ್ಥೆಗಳು ಕಾಫಿ ತೋಟ ಕೈಗಾರಿಕೆಯ ಒಂದು ಅಂಗವಾಗಿದ್ದು, ಕ್ಯೂರಿಂಗ್ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ದಿನ ಒಂದರ ಕೆಲಸಕ್ಕೆ ಕೇವಲ ರೂ. 3 ದೊರೆಯುವುದು. ಶೋಚನೀಯ.

ಬೆಲೆಯೇರಿಕೆಯ ಕಾಲಘಟ್ಟದಲ್ಲಿ ದಿನ ಒಂದಕ್ಕೆ ಒಬ್ಬ ಕಾರ್ಮಿಕ ರೂ. 3 ದುಡಿದರೂ ಯಾವ ಉಪಯೋಗವು ಆಗಲಾರದು. ಈ ಶೋಚನೀಯ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಮೇಲ್ಕಂಡ ಸಂಘ ಕ್ಯೂರಿಂಗ್ ಆಡಳಿತ ಮಂಡಳಿಗಳಿಗೆ ಸಂಬಳ ಮತ್ತು ಕೂಲಿ ಹೆಚ್ಚಳದ ಬೇಡಿಕೆಗಳಿಗಾಗಿ ಮನವಿ ಸಲ್ಲಿಸಿದೆ.

○

ರೈತರಿಗೆ ಪರಿಹಾರ ನೀಡಲು ಒತ್ತಾಯ

ತಾ. 21.11.1979 ರಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಮಲೆನಾಡು ಪ್ರಾದೇಶಿಕ ಸಮಿತಿಯು ಚಿಕ್ಕಮಗಳೂರಿನಲ್ಲಿ ಸಭೆ ಸೇರಿ ಈ ತಿಂಗಳು ಅಕಾಲಮಳೆ ಬಂದುದರ ಪರಿಣಾಮವಾಗಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬೆಳೆಗಳಿಗೆ ಅಪಾರ ಹಾನಿಯುಂಟಾದುದರ ಬಗ್ಗೆ ಕಳವಳ ವ್ಯಕ್ತಪಡಿಸಿತು.

ದೊಡ್ಡ ದೊಡ್ಡ ಭೂಮಾಲಕರು ಶ್ರೀಮಂತ ರೈತರು ಹಾನಿಯನ್ನು ಹೇಗಾದರೂ ನಿಭಾಯಿಸಬಲ್ಲರು! ಆದರೆ ಚಿಕ್ಕಪುಟ್ಟ ರೈತರು, ಸಣ್ಣ ಹಿಡುವಳಿದಾರರು ಬೆಳೆಗಳು ನಷ್ಟವಾಗಿರುವುದರಿಂದ ಕಂಗಾಲಾಗಿದ್ದಾರೆ. ಆದುದರಿಂದ ಸರಕಾರವು ಕೂಡಲೆ ಗಮನಹರಿಸಿ ರೈತರಿಗೆ ಸೂಕ್ತ ನೆರವು ನೀಡಬೇಕೆಂದು ಸಮಿತಿಯು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ತಾ 3.10.1979 ರಂದು ಎಚ್. ಎಸ್.ಸಿ.ಎಲ್. ಕಾರ್ಮಿಕರ ಮೇಲೆ ವಿನಾಕಾರಣ ಲಾಠೀಚಾರ್ಜು ನಡೆಸಿ ಹಲವಾರು ಜನರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿರುವ ಮಲ್ಲೇಶ್ವರದ ಪೋಲೀಸರ ಕ್ರಮವನ್ನು ಸಭೆಯು ಖಂಡಿಸಿತು. ಘರ್ಷಣೆಗೆ ಕಾರಣರಾದ ತಪ್ಪಿತಸ್ಥರನ್ನು ಶಿಕ್ಷಿಸುವಂತೆಯೂ, ನಿರಪರಾಧಿ ಕಾರ್ಮಿಕರ ಮೇಲೆ ಹೇರಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವಂತೆಯೂ ಒತ್ತಾಯಪಡಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

○

ವೀರಾಜಪೇಟೆಯಲ್ಲಿ ಸಾಂಕೇತಿಕ ಮುಷ್ಕರ

ಸಿ. ಐ. ಟಿ. ಯು. ಗೆ ಸೇರಿದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ದಿನಾಂಕ 30-11-79ರಂದು ಜಿಲ್ಲೆಯಾದ್ಯಂತ ಪಿ. ಡಬ್ಲ್ಯು.ಡಿ. ಕಾರ್ಮಿಕರು, ತೋಟ ಕಾರ್ಮಿಕರು, ಸಾಮಿಲ್ಲಿನ ಕಾರ್ಮಿಕರು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ನಡೆಸುತ್ತಾರೆ. ಈ ಮೇಲ್ಕಂಡ ಕಾರ್ಮಿಕರು ತಮ್ಮ ಮೂಲಭೂತ ಬೇಡಿಕೆಗಳ ಬಗ್ಗೆ ಸರ್ಕಾರದ, ಮ್ಯಾನೇಜ್‌ಮೆಂಟ್‌ಗಳ ಗಮನ ಸೆಳೆಯಲು ಮತ್ತು ಕಾಯಿದೆಯ ಪ್ರಕಾರ ದೊರೆಯಬೇಕಾದ ಸೌಲಭ್ಯಗಳನ್ನು ನೀಡಲು ನಿರಾಕರಿಸುತ್ತಿರುವ ಮ್ಯಾನೇಜ್‌ಮೆಂಟುಗಳ ಮೇಲೆ ಸೂಕ್ತ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸುವ ಸಲುವಾಗಿ ಈ ಮುಷ್ಕರ ನಡೆಸಲಿದ್ದಾರೆ.

ಸ್ಪಷ್ಟವಾದ ಸೈದ್ಧಾಂತಿಕ ತಳಹದಿಯುಳ್ಳ ನಾಯಕತ್ವದ ಕೊರತೆಯಿಂದ, ಹೋರಾಟ ಪ್ರಜ್ಞೆಯನ್ನು ಬೆಳೆಸಿಕೊಳ್ಳದೆ ಒಂದು ರೀತಿಯ ಗುಲಾಮಗಿರಿಯಲ್ಲಿ ಸಿಲುಕಿದ ಕೊಡಗಿನ ಕಾರ್ಮಿಕರು ಈಗ ಎಚ್ಚೆತ್ತಿದ್ದಾರೆ. ದೇಶದಲ್ಲಿ ಹಾಗೂ ರಾಜ್ಯದಲ್ಲಿ ಆಗುತ್ತಿರುವ ತೀವ್ರ ರೀತಿಯ ರಾಜಕೀಯ ಬದಲಾವಣೆಗಳು ಜಿಲ್ಲೆಯ ಮೇಲೂ ಪರಿಣಾಮ ಬೀರಿದೆ. ಕಾರ್ಮಿಕರಲ್ಲಿ ವರ್ಗ ಜಾಗೃತಿ ಬೆಳೆಯುತ್ತಿದೆ. ದೇಶದಲ್ಲಿ ಎಡ ಪಕ್ಷಗಳು ಜನಸಾಮಾನ್ಯರ ಮಧ್ಯೆ ಪ್ರಭಾವಯುತವಾಗಿ ಬೆಳೆಯುತ್ತಿರುವ ಸಂದರ್ಭದಲ್ಲೇ ಕೊಡಗಿನಲ್ಲು ಸಹ ಸಿ. ಐ. ಟಿ. ಯು. ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಬಂಡವಾಳಶಾಹಿ ವರ್ಗಗಳು ಮ್ಯಾನೇಜ್‌ಮೆಂಟ್‌ಗಳು ತಮ್ಮ ರಕ್ಷಣೆಗಾಗಿ ಬಳಸಲ್ಪಡುತ್ತಿರುವ ಒಂದು ಉಪಕರಣವಾದ ಪೋಲೀಸರಿಂದ ಕಾರ್ಮಿಕ ಚಳುವಳಿಗಳನ್ನು ದಮನಮಾಡುತ್ತಿದ್ದಾರೆ. ತಮ್ಮ ಗೂಂಡಾಗಳ ಮೂಲಕ ಕಾರ್ಮಿಕರಲ್ಲಿ ಭಯೋತ್ಪಾದನೆ ಉಂಟು ಮಾಡುತ್ತಿದ್ದಾರೆ. ಎಲ್ಲಾ ತಂತ್ರಗಳನ್ನು ಪಯೋಗಿಸಿ ಕಾರ್ಮಿಕರಲ್ಲಿ ಒಡಕುಂಟುಮಾಡುತ್ತಿದ್ದಾರೆ. ಇಂತಹ ದಮನಕಾರಿ ಚಟುವಟಿಕೆಗಳನ್ನು ಸಿ. ಐ. ಟಿ. ಯು. ಕಾರ್ಮಿಕರ ಮೇಲೆ ಮಾತ್ರ ಪ್ರಯೋಗಿಸುತ್ತಿರುವುದಕ್ಕೆ ಕಾರಣವೂ ಸಹ ಇದೆ. ಸಿ. ಐ. ಟಿ. ಯು. ಕಾರ್ಮಿಕ ವರ್ಗವನ್ನು ರಾಜಕೀಯವಾಗಿ ಸಂಘಟಿಸುತ್ತಿದೆ. ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಿ ವರ್ಗ ಸಮರದ ಮೂಲಕ ಇಂದಿನ ಬಂಡವಾಳಶಾಹಿ ಪದ್ಧತಿಯನ್ನು ನಿರ್ಮೂಲಮಾಡಿ ಒಂದು ಹೊಸ ಸಮಾಜವಾದಿ ವ್ಯವಸ್ಥೆಯನ್ನು ರೂಪಿಸುವ ದೃಷ್ಟಿಯಲ್ಲಿ ಹೋರಾಟ ನಡೆಸುತ್ತಿದೆ. ಇಂತಹ ಒಂದು ಬೆಳವಣಿಗೆಯನ್ನು ಇಲ್ಲಿನ ಬಂಡವಾಳಶಾಹಿ ಭೂಮಾಲೀಕ ವರ್ಗ ಸಹಿಸಲು ಸಾಧ್ಯವೇ ?

ಕಾರ್ಮಿಕರ ಹೋರಾಟಗಳನ್ನು ದಮನಗೊಳಿಸುವ ಮೂಲಕ, ಸಿ. ಐ. ಟಿ. ಯು. ಸಂಘಟನೆಯನ್ನು ಅಳಿಸಿ ಹಾಕಬಹುದು ಮತ್ತು ತಮ್ಮ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಬಹುದೆಂದು ಜಿಲ್ಲೆಯ ಮಾಲೀಕ ವರ್ಗ ಭಾವಿಸಿರುವಂತೆ ಕಾಣುತ್ತದೆ. ಆದರೆ ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದಷ್ಟೂ ಅದು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯುತ್ತದೆ ಎಂಬ ಚಾರಿತ್ರಿಕ ಸತ್ಯವನ್ನು ಈಗಲಾದರೂ ಮಾಲೀಕರು ಅರಿತುಕೊಳ್ಳುವುದೊಳ್ಳೆಯದು.

30-11-79 ರಂದು ನಡೆಸುವ ಮುಷ್ಕರಕ್ಕೆ ಕೊಡಗಿನ ಕಾರ್ಮಿಕರು, ರೈತರು, ಕೃಷಿಕಾರ್ಮಿಕರು, ವಿದ್ಯಾರ್ಥಿ ಯುವಜನರು ತಮ್ಮ ಸಂಪೂರ್ಣ ಬೆಂಬಲ ನೀಡಬೇಕೆಂದು ಮತ್ತು ಎಲ್ಲಾ ಪ್ರಗತಿಪರ ಪ್ರಜಾಸತ್ತಾತ್ಮಕ ಸಂಘಟನೆಗಳು ಕಾರ್ಮಿಕರ ಹೋರಾಟದಲ್ಲಿ ಸಹಕರಿಸಬೇಕೆಂದು ಸಿ. ಐ. ಟಿ. ಯು. ಕೊಡಗು ಜಿಲ್ಲಾ ಸಮಿತಿ ವಿನಂತಿಸಿದೆ.

○

ಹಮಾಲಿ ಕಾರ್ಮಿಕರ ಸಂಘ ಸ್ಥಾಪನೆ

ತಾ.25.11.79ನೇ ಭಾನುವಾರ ಸಾಯಂಕಾಲ 3 ಗಂಟೆಗೆ ಶಿವಮೊಗ್ಗ ನಗರದ ಹಮಾಲಿ ಕಾರ್ಮಿಕರ ಸಭೆಯು ನಗರದ ನ್ಯಾಯವಾದಿಗಳಾದ ಶ್ರೀ ಬಿ. ತಿರುಕೊಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀ ಕೃಷ್ಣ ಟ್ರಾನ್ಸ್‌ಪೋರ್ಟ್ ಮಾಲೀಕರಾದ ಶ್ರೀ ಶಂಕರನಾರಾಯಣನ್‌ರವರು ಎಲ್ಲರನ್ನೂ ಸ್ವಾಗತಿದರು. ಕಾರ್ಮಿಕ ಮುಖಂಡರಾದ ಶ್ರೀ ಚಂದುಕುಟ್ಟಿಯವರು ಮಾತನಾಡುತ್ತಾ, ಅಸಂಘಟಿತ ಕಾರ್ಮಿಕರಾದ ಹಮಾಲಿ ಕಾರ್ಮಿಕರು ಸಂಘಟಿತರಾಗಿ, ಒಗ್ಗಟ್ಟಾಗಿ ಸಂಘವನ್ನು ಸ್ಥಾಪಿಸುವ ಅವಶ್ಯಕತೆಯ ಬಗ್ಗೆ ವಿವರಿಸಿ ಮಾತನಾಡಿದರು ಅಧ್ಯಕ್ಷರು ಮಾತನಾಡುತ್ತಾ ಕಾರ್ಮಿಕರು ಸಂಘಟಿತರಾಗಿ ಶಿಸ್ತಿನಿಂದ ಇರಬೇಕೆಂದು ಅವರಿಗೆ ಬೇಕಾದ ಸಹಾಯ ಮಾಡಲು ಯಾವಾಗಲೂ ಸಿದ್ಧವೆಂದು ಭರವಸೆ ನೀಡಿದರು. ಅಲ್ಲದೆ ಶ್ರೀಗಳಾದ ರಾಮಸ್ವಾಮಿ ಶೆಟ್ಟರು, ಕಾಸಿಂಖಾನ್, ಯೂಸಫ್‌ಖಾನ್ ಮುಂತಾದವರು ಮಾತನಾಡಿ ಸಂಘಕ್ಕೆ ಬೆಂಬಲ ಸೂಚಿಸಿದರು ಮತ್ತು ಮುಂದಿನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ಕೆಳಗೆ ಕಂಡವರನ್ನೊಳಗೊಂಡ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಶ್ರೀ ಕೃಷ್ಣಮೂರ್ತಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಕಾರ್ಯಕಾರಿ ಸಮಿತಿಯವರು :- ಶ್ರೀ ಬಿ.ತಿರುಕೊಪ್ಪ ವಕೀಲರು ಅಧ್ಯಕ್ಷರು, ಶ್ರೀಗಳಾದ ವಿ. ಬಸವರಾಜ್, ಸಿ.ಟಿ. ರಾಮಸ್ವಾಮಿ ಶೆಟ್ಟರು, ಖಾಸಿಂ ಸಾಬ್ ಉಪಾಧ್ಯಕ್ಷರುಗಳು. ಶ್ರೀ ಕೆ. ಚಂದುಕುಟ್ಟಿ ಕಾರ್ಯದರ್ಶಿ, ಶ್ರೀಗಳಾದ ಕಾಸಿಂಖಾನ್, ಯೂಸಫ್ ಖಾನ್, ಆರ್. ಕೃಷ್ಣಮೂರ್ತಿ, ವೈ. ಈರಪ್ಪ ಉಪಕಾರ್ಯದರ್ಶಿಗಳು. ಶ್ರೀ ಪಿ.ಶಂಕರನಾರಾಯಣನ್ ಕೋಶಾಧ್ಯಕ್ಷರು ಮತ್ತು 30 ಜನ ಸಮಿತಿ ಸದಸ್ಯರುಗಳನ್ನು ಆರಿಸಿದರು.

○

ತೋಟ ಕಾರ್ಮಿಕರ ಸಭೆ

ತಾ. 20-11-1979 ರಂದು ಚಿಕ್ಕಮಗಳೂರು ತಾಲ್ಲೂಕಿನ, 'ಸಂಸೆ' ಟೀ ತೋಟ ಕಾರ್ಮಿಕರ ಸಭೆಯು ನಡೆಯಿತು. ತೋಟ ಕಾರ್ಮಿಕರನ್ನುದ್ದೇಶಿಸಿ ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ವಿನ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಮಾತನಾಡಿದರು.

ಸಿ. ಐ. ಟಿ. ಯು. ಕೇವಲ ಆರ್ಥಿಕ ಬೇಡಿಕೆಗಳಿಗಷ್ಟೆ ಹೋರಾಟ ಮಾಡುತ್ತಿಲ್ಲ. ದುಡಿಯುವ ವರ್ಗದ ಕೈಯಲ್ಲಿ ರಾಜಕೀಯ ಅಧಿಕಾರ ಬರಬೇಕೆಂಬ ಉದಾತ್ತ ಧ್ಯೇಯವನ್ನು ಹೊಂದಿ ಆ ದಿಸೆಯಲ್ಲಿ ಕಾರ್ಯವೆಸಗುತ್ತಿದೆಯೆಂದು, ದೇಶದ ಎಲ್ಲಾ ದುಡಿಯುವ ವರ್ಗ ಸಂಘಟನೆಯಾಗಬೇಕೆಂಬುದೇ ಅದರ ಉದ್ದೇಶವೆಂದು ತಿಳಿಸಿದರು.

ಸಿ. ಐ. ಟಿ. ಯು. ವಿನ ರಚನೆ, ಧ್ಯೇಯ ಧೋರಣೆಗಳ ಬಗ್ಗೆ ವಿವರಣೆ ಕೊಡುತ್ತಾ ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ಸಿ. ಐ. ಟಿ. ಯು. ವನ್ನು ಬಲಪಡಿಸಬೇಕೆಂದು ಕೇಳಿಕೊಂಡರು. ಸಭೆಯು ಒಕ್ಕೊರಲಿನಿಂದ ಬೆಂಗಳೂರಿನ ಮೈಕೋ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ ಸರಕಾರವು ಕೂಡಲೇ ಮಧ್ಯ ಪ್ರವೇಶಮಾಡಿ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ನಿರ್ಣಯಿಸಿ ಗೊತ್ತುವಳಿಯನ್ನು ಸ್ವೀಕರಿಸಿತು.

ಆಡಳಿತ ಮಂಡಳಿಯು ಹೇರಿರುವ ಬೀಗಮುದ್ರೆಯ ವಿರುದ್ಧ ಹೋರಾಡುತ್ತಿರುವ ದಾಂಡೇಲಿಯ ಎಲೆಕ್ಟ್ರೊ-ಮೆಟಲರ್ಜಿಕಲ್ ಕಾರ್ಮಿಕರಿಗೂ ಬೆಂಬಲ ಸೂಚಿಸಿ ನಿರ್ಣಯ ತೆಗೆದುಕೊಂಡಿತು.

ಕುದ್ರೆಮುಖದ ಹೆಚ್. ಎಸ್. ಸಿ. ಎಲ್. ಎಂಪ್ಲಾಯೀಸ್‌ಅಸೋಸಿಯೇಶನ್ (ಸಿ.ಐ.ಟಿ.ಯು.) ಸದಸ್ಯರ ಮೇಲೆ ತಾ. 30-10-79 ರಂದು ಪೋಲೀಸರು ಲಾಠಿಚಾರ್ಜು ಮಾಡಿದ್ದನ್ನು ಮತ್ತು ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದನ್ನು ಹಾಗೂ ಮೈಕೋ ಕಾರ್ಮಿಕ ಧುರೀಣರ ಮೇಲೆ ಮ್ಯಾನೇಜ್‌ಮೆಂಟಿನವರು ಗೂಂಡಾ ಧಾಳಿ ಮಾಡಿಸಿದ್ದನ್ನು ಸಭೆಯು ಉಗ್ರವಾಗಿ ಖಂಡಿಸಿತು.

ಸಭೆಯಲ್ಲಿ ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಂ. ಎ. ಸಿ. ಕೇಶವ ಮತ್ತು ಸಂಘಟಕರಾದ ಕಾಂ. ಕೆ. ರಾಮದಾಸ್‌ರವರು ಉಪಸ್ಥಿತರಿದ್ದರು.

○

ಶಿವಮೊಗ್ಗ ಜಿಲ್ಲಾ ಸಮಿತಿ ಸಭೆ

ತಾ. 23-11-79ನೇ ಶುಕ್ರವಾರ ಸಾಯಂಕಾಲ 5 ಗಂಟೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಸಭೆಯು ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಸಿ. ಐ. ಟಿ. ಯು. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ಚಂದುಕುಟ್ಟಿಯವರು ಪಕ್ಷದ ಚಟುವಟಿಕೆಗಳ ಬಗ್ಗೆ ವರದಿ ಮಾಡಿದರು. ಅಧ್ಯಕ್ಷರು ಮಾತನಾಡುತ್ತಾ ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿದ, ಸರ್ವಾಧಿಕಾರ ಮತ್ತು ಕೋಮುವಾದಿ ಶಕ್ತಿಗಳ ವಿರೋಧ ರಾಜ್ಯಮಟ್ಟದ ಅಧಿವೇಶನದ ವರದಿ ಮತ್ತು ತಾ.11-11-79ರಂದು ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸಭೆಯ ತೀರ್ಮಾನಗಳನ್ನು ವಿವರಿಸಿ ವರದಿ ಮಾಡಿದರು ಮತ್ತು ಈ ಕೆಳಗೆ ಕಂಡ ತೀರ್ಮಾನಗಳನ್ನು ಸಭೆ ಅಂಗೀಕರಿಸಿದರು.

1. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಅದೇ ಅಭಿಪ್ರಾಯವುಳ್ಳ ಇತರ ಪಕ್ಷಗಳೊಂದಿಗೆ ಸೇರಿ ಸ್ಪರ್ಧಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ. ಈಗಿನ ಪರಿಸ್ಥಿತಿಯಲ್ಲಿ ಚುನಾವಣಾ ಸಹಾಯಕ್ಕಾಗಿ ರಾಜ್ಯಸಮಿತಿಯು ಒಂದು ಚುನಾವಣಾ ನಿಧಿಗೂಡಿಸಲು ನಿರ್ಧರಿಸಿದೆ. ಸಾರ್ವಜನಿಕರು ಉದಾರ ಮನಸ್ಸಿನಿಂದ ಚುನಾವಣಾ ನಿಧಿಗೆ ಸಹಾಯ ಮಾಡಬೇಕೆಂದು ಸಭೆಯು ಕೇಳಿಕೊಂಡಿದೆ.

2. ನಗರದ ಪವರ್ ಕೈಪಾಸಿಟರ್ ಕಾರ್ಮಿಕರು ಅವರ ನ್ಯಾಯವಾದ ಬೇಡಿಕೆಗಳಿಗೋಸ್ಕರ ಮಾಡುತ್ತಿರುವ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅದರ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಬದಲಾಗಿರುವ ಈಗಿನ ಪರಿಸ್ಥಿತಿಯಲ್ಲಿ ಮಾಲೀಕರೂ, ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಹಾನುಭೂತಿ ತೋರಿಸಬೇಕೆಂದು ಒತ್ತಾಯಪಡಿಸಿದೆ.

3. ತಮ್ಮ ಆಸ್ತಿಗಳಿಗಾಗಿ ಹರಮಘಟ್ಟ ದಲಿತರು ಮಾಡುತ್ತಿರುವ ಸತ್ಯಾಗ್ರಹ ಹೋರಾಟಕ್ಕೆ ಸಭೆಯು ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

○

ಮಿದುಳು ಜ್ವರ ತಡೆಗಾಗಿ ಸಿ.ಪಿ.ಐ.(ಎಂ) ಕ್ರಮ

ತಾ. 25.11.79 ರಿಂದ 3ದಿನ ಇಡೀ ಶಿಡ್ಲಘಟ್ಟ ಟೌನ್‌ನಲ್ಲಿ ಮಿದಳು ಜ್ವರ ತಡೆಗಾಗಿ ಮುಂಜಾಗ್ರತೆಯ ಕ್ರಮವಾಗಿ ತಾಲ್ಲೂಕು ಸಿ ಪಿ.ಐ.(ಎಂ) ವತಿಯಿಂದ ಪಿಥಿಯರ್ಮಾ ಔಷಧಿಯನ್ನು ಸಿಂಪಡಿಸಲಾಯ್ತು.

ಈ ಬಗ್ಗೆ ಪುರಸಭೆಯವರು ಯಾವ ಕ್ರಮವು ಕೈಗೊಳ್ಳದೇ ಇದ್ದು. ಸಿ ಪಿ ಐ. (ಎಂ) ಕ್ರಮವಹಿಸಿದ್ದರ ಬಗ್ಗೆ ಟೌನ್‌ನ ನಾಗರೀಕರು ನೈರ್ಮಲ್ಯದ ಕಾರ್ಯದಲ್ಲಿ ಸಂಪೂರ್ಣ ಸಹಕಾರ ನೀಡಲು ಮುಂದೆ ಬಂದಿರುವುದು ಸಂತಸದ ವಿಚಾರ. ಟೌನ್‌ನ ಪ್ರಮುಖ ರೈತರಾದ ಶ್ರೀ ಓ.ತಿಮ್ಮಯ್ಯ ಎಂಬವರು ಇಂದು 110.00 ರೂ.ಗೆ 2ಮೂಟೆ B.H.C ಔಷಧಿಗಳನ್ನು ಸಿ ಪಿ.ಐ. (ಎಂ) ತಾಲ್ಲೂಕು ಕಾರ್ಯದರ್ಶಿ ಜೆ. ದೊರೆಸ್ವಾಮಿಯವರಿಗೆ ತಲುಪಿಸಿ, ಸಹಕಾರ ನೀಡಿರುವುದಾಗಿಯು. ನಾಳೆಯಿಂದ B.H C. ಪೌಡರನ್ನು ಟೌನ್‌ನಲ್ಲಿ ಸಿಂಪಡಿಸುವುದಾಗಿ ತಿಳಿಸಿದ್ದಾರೆ.

●

ಮೈಕೋ ಮುಷ್ಕರ ನಿಷೇಧ – ಖಂಡನೆ

ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯಾದ ಮೋಟಾರ್ ಇಂಡಸ್ಟ್ರೀಸ್ ಕಂಪೆನಿ (ಮೈಕೋ) ಯಲ್ಲಿ ಸುಮಾರು ಒಂದು ತಿಂಗಳಿಂದ ತಮ್ಮ ಅನೇಕ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗಾಗಿ ನಡೆಸುತ್ತಿರುವ ಹೋರಾಟವನ್ನು ಸರ್ಕಾರ ರದ್ದುಪಡಿಸಿರುವುದನ್ನು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಖಂಡಿಸಿದೆ. ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಇದು ಎತ್ತಿ ತೋರಿಸಿದೆ. ದೇಶದಲ್ಲಿ ಬೆಳೆದು ಬರುತ್ತಿರುವ ವಿದೇಶಿ ರಾಷ್ಟ್ರಗಳ ಲಾಭಕೋರತನಕ್ಕೆ ಆಳುವ ವರ್ಗಗಳು ಹೇಗೆ ಸಹಾಯ ಮಾಡುತ್ತಿವೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಹೋರಾಟದಲ್ಲಿ ನಿರತರಾಗಿರುವ ಮೈಕೋ ಕಾರ್ಮಿಕರಿಗೆ, ತಾ. 25-11-79 ರಂದು ನಡೆದ ಸಂಘದ ಕಾರ್ಯಕಾರಿ ಸಮಿತಿಯು ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

○

ಸರಕಾರದ ಕಾರ್ಮಿಕ ವಿರೋಧಿ ನೀತಿಯ ಖಂಡನೆ

ಸಕಲೇಶಪುರ ತಾಲ್ಲೂಕಿನಲ್ಲಿರುವ ಬಸ್ಸೂರು ತೋಟದ ಕಾರ್ಮಿಕರು ತಾ. 27-11-79 ರಂದು ಕಾಂ. ಆರ್ಮುಗ ಮೇಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬೆಂಗಳೂರಿನಲ್ಲಿರುವ ಬಹುರಾಷ್ಟ್ರೀಯ ಸಂಸ್ಥೆಯಾದ ಮೈಕೋ ಕಾರ್ಖಾನೆಯ ಕಾರ್ಮಿಕರು ಕಳೆದ 54 ದಿನಗಳಿಂದ ನಡೆಸುತ್ತಿರುವದೀರ್ಘ ಹೋರಾಟವನ್ನು ಮುರಿಯಲು ಅನುಕೂಲವಾಗುವಂತೆ ಸರಕಾರ ಮುಷ್ಕರವನ್ನು ನಿಷೇಧಿಸುವ ಆಜ್ಞೆ ಹೊರಡಿಸಿರುವುದನ್ನು ಖಂಡಿಸಿತು. ಮೈಕೋ ಕಾರ್ಮಿಕರ ಸಂಘದ ಅಧ್ಯಕ್ಷರೂ, ಸಿ. ಐ. ಟಿ. ಯು. ರಾಜ್ಯ ಮಂಡಳಿಯ ಅಧ್ಯಕ್ಷರೂ ಆದ ಕಾಂ.ಎಸ್. ಸೂರ್ಯನಾರಾಯಣರಾವ್ ಮತ್ತು ಸದರಿ ಸಂಘದ ಕೆಲವು ಪದಾಧಿಕಾರಿಗಳು ಹಾಗೂ ನೌಕರರ ಮನೆಯ ಮೇಲೆ ಆಡಳಿತ ಮಂಡಳಿಯ ಗೂಂಡಾಗಳು ನಡೆಸುತ್ತಿರುವ ಧಾಳಿಯನ್ನು ಸಹಾ ಸಭೆಯು ಖಂಡಿಸಿತು. ಕೂಡಲೇ ಮೈಕೋ ಕಾರ್ಮಿಕರ ಮುಷ್ಕರ ನಿಶೇದಾಜ್ಞೆಯನ್ನು ರಾಜ್ಯ ಸರಕಾರ ಹಿಂತೆಗೆದುಕೊಳ್ಳಬೇಕೆಂದೂ, ಸದರಿ ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಲು ಆಡಳಿತ ಮಂಡಳಿ ಮುಂದೆ ಬರಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

ಈ ಸಭೆಯಲ್ಲಿ ಉಪಸ್ಥಿತರಿದ್ದ ಕರ್ನಾಟಕ ತೋಟ ಕಾರ್ಮಿಕರಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರರವರು ನಮ್ಮ ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿ, ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳ ಅಪಾಯ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಅಧಿಕಾರಕ್ಕೆ ಬರುವಂತೆ ಮಾಡುವಲ್ಲಿ ಕಾರ್ಮಿಕವರ್ಗದ ಚಾರಿತ್ರಿಕ ಜವಾಬ್ದಾರಿಯ ಬಗ್ಗೆ ವಿವರಿಸಿದರು. ಇತ್ತೀಚೆಗೆ ಕಾರ್ಮಿಕ ವಿರೋಧಿ ಚಟುವಟಿಕೆಗಳಿಗಾಗಿ ಸಂಘದಿಂದ ಹೊರದೂಡಲ್ಪಟ್ಟಿರುವ ವ್ಯಕ್ತಿಗಳ ವಿಚ್ಛಿದ್ರಕಾರಿ ಕೆಲಸಗಳಿಗೆ ಯಾರೂ ಬಲಿ ಬೀಳಬಾರದೆಂದು ಎಚ್ಚರಿಸಿದರು.

ಕಾಂ. ಪೊನ್ನ ಕಾರ್ಯದರ್ಶಿಯಾಗಿರುವ, ಕೆ. ರಾಜು, ಕೊರಮ ಚನ್ನಪ್ಪ, ಸುಬ್ರಮಣಿ, ಪರಶುರಾಮ, ಸಂಜೀವ, ಆರ್ಮುಗ ಮೇಸ್ತ್ರಿ, ಐತಪ್ಪ ಮತ್ತು ಮುತ್ತು ಸದಸ್ಯರಿರುವ ಹತ್ತು ಸದಸ್ಯರ ಒಂದು ಎಸ್ಟೇಟ್ ಕಮಿಟಿಯನ್ನು ಚುನಾಯಿಸಲಾಯಿತು.

ಈ ಸಭೆಯಲ್ಲಿ ಸಂಘದ ಉಪಕಾರ್ಯದರ್ಶಿ ಕಾಂ. ಪಾಲ್ ಖಜಾಂಚಿ, ಕಾಂ. ಮಾಜರವರು ಹಾಜರಿದ್ದರು. ○

ಸರ್ವಾಧಿಕಾರಿ ಹಾಗೂ ಜಾತೀಯ ಶಕ್ತಿಗಳನ್ನು ಸೋಲಿಸಿರಿ

ರಾಜಕೀಯಾಧಿಕಾರವನ್ನು ಕಬಳಿಸಲು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಹಾಗೂ ಜಾತೀಯವಾದಿ ಆರ್. ಎಸ್. ಎಸ್.-ಜನಸಂಘ ನಿಯಂತ್ರಿತ ಜನತಾಪಕ್ಷಗಳು ಶತಪ್ರಯತ್ನವನ್ನು ಮಾಡುತ್ತಿವೆ. ಮುಂಬರುವ ಲೋಕಸಭಾ ಚುನಾವಣೆಯನ್ನು ಸರ್ವಾಧಿಕಾರಿ ಹಾಗೂ ಜಾತೀಯವಾದಿಗಳ ವಿರುದ್ಧ ನಡೆಯುವ ಹೋರಾಟವೆಂದು ಪರಿಗಣಿಸಿ ಈ ಅಪಾಯಕಾರಿ ಶಕ್ತಿಗಳನ್ನು ಸೋಲಿಸುವುದು ಅನಿವಾರ್ಯವೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯಕರ್ತರ ಸಭೆಯಲ್ಲಿ ಕಾಂ. ವಿ. ಜೆ. ಕೆ. ನಾಯರ್ ಕರೆ ನೀಡಿದರು.

ಲೋಕಸಭಾ ಚುನಾವಣೆಯನ್ನು ಎದುರಿಸುವ ಪೂರ್ವ ಸಿದ್ಧತೆಯಾಗಿ ಚುನಾವಣಾ ಸಮಿತಿಯ ರಚನೆಯ ಸಂದರ್ಭದಲ್ಲಿ ಮಾತನಾಡುತ್ತಾ ಅವರು ಮಾರ್ಕ್ಸ್‌ವಾದಿಗಳು ಸೈದ್ಧಾಂತಿಕವಾಗಿ ಸಮಾಜದ್ರೋಹಿ ಬೆಳವಣಿಗೆಗಳ ವಿರುದ್ಧ ಹೋರಾಡಲು ಸದಾ ಸಿದ್ಧವೆಂದು ಒತ್ತಿ ಹೇಳಿದರು.

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಪಕ್ಷದ ಸದಸ್ಯರು ಮತ್ತು ಹಿತೈಷಿಗಳು 55 ಜನ ಸದಸ್ಯರಿರುವ ಜಿಲ್ಲಾ ಚುನಾವಣಾ ಸಮಿತಿಯನ್ನು ರಚಿಸಿದರು. ಸಮಿತಿಯ ಅಧ್ಯಕ್ಷರಾಗಿ ಕಾಂ. ಕೆ. ವಿ. ಮುತ್ತಪ್ಪ, ಉಪಾಧ್ಯಕ್ಷರಾಗಿ ಕಾಂ. ಟಿ. ಬಿ. ಸುಬ್ಬಯ್ಯ, ಕಾರ್ಯದರ್ಶಿಗಳಾಗಿ ಕಾಂ. ನಾರಾಯಣ, ಸಹಕಾರ್ಯದರ್ಶಿಗಳಾಗಿ ಕಾಂ. ಲತೀಫ್‌ಕ.ರಿಪ್ಪನ್ ಮತ್ತು ಖಜಾಂಚಿಯಾಗಿ ಕಾಂ.ಅಪ್ಪಣ್ಣನವರುಗಳನ್ನು ಸಭೆ ಸರ್ವಾನುಮತದಿಂದ ಆಯ್ಕೆಮಾಡಿತು.

ಪ್ರಸಕ್ತ ಲೋಕಸಭಾ ಚುನಾವಣೆ ವೆಚ್ಚಕ್ಕಾಗಿ ಧನ ಸಹಾಯ ನೀಡಲು ಸಿ. ಐ. ಟಿ. ಯು. ಗೆ ಸೇರಿದ ಕಾರ್ಮಿಕರು, ಪಕ್ಷದ ಹಿತೈಷಿಗಳು ಮುಂದೆ ಬಂದಿರುತ್ತಾರೆ. ಪ್ರಗತಿಪರ ಪ್ರಜಾಪ್ರಭುತ್ವವಾದಿಗಳಿಂದಲೂ ನಿಧಿ ಸಂಗ್ರಹಿಸಲು ತೀರ್ಮಾನಿಸಲಾಯಿತು.

ಕೂಡಲೇ ತಾಲ್ಲೋಕು ಮಟ್ಟಗಳಲ್ಲೂ ಕೂಡ ಚುನಾವಣಾ ಸಮಿತಿಗಳನ್ನು ರಚಿಸುವಂತೆಯೂ ಈಗಿನಿಂದಲೇ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಚುನಾವಣಾ ಪ್ರಚಾರ ಕಾರ್ಯವನ್ನು ಪ್ರಾರಂಭಿಸಬೇಕೆಂದೂ ತೀರ್ಮಾನಿಸಲಾಯಿತು. ○

ಸರ್ವಾಧಿಕಾರಿ ಹಾಗೂ ಜಾತೀಯವಾದಿಗಳನ್ನು ಸೋಲಿಸಿರಿ

ಕಾಂ. ಎಂ. ಕೆ. ಭಟ್

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ನೌಕರರು ಎಚ್ಚೆತ್ತು ದಲಿತ ವರ್ಗದ ಅಧಿಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಗುತ್ತೇದಾರಿ ಬಂಡವಾಳಶಾಹಿಗಳನ್ನು ಅವಲಂಬಿಸಿಕೊಂಡಿರುವ ಸರ್ವಾಧಿಕಾರಿ ಮತ್ತು ಜಾತೀಯವಾದಿ ಶಕ್ತಿಗಳನ್ನು ಸೋಲಿಸಲು ಬುಜಕ್ಕೆ ಬುಜಕೊಟ್ಟು ಚುನಾವಣಾ ಹೋರಾಟ ನಡೆಸಬೇಕೆಂಬುದಾಗಿ. ಬಂಟ್ವಾಳ ಬುಡಕಟ್ಟೆಯಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಕರ್ನಾಟಕ ರಾಜ್ಯದ ಮಾರ್ಕ್ಸಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್. ಕರೆ ನೀಡಿದರು.

ಕೃಷಿಕಾರ್ಮಿಕರು, ರೈತರು ಮತ್ತು ಬೀಡಿ ಮಜೂರರು ಸಂಘಟಿತ ಹೋರಾಟ ಮಾಡದೆ ಜನಸಾಮಾನ್ಯರ ಪ್ರಾಮುಖ್ಯ ಬೇಡಿಕೆಗಳು ಈಡೇರುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಕೇರಳ ರಾಜ್ಯದ ಮಂಜೇಶ್ವರದ ಪಂಚಾಯತ್ ಬೋರ್ಡ್ ಛೇರ್‌ಮನ್ ಕಾಂ. ಬಿ. ಎಂ. ರಾಮಯ್ಯಶೆಟ್ಟಿ ಹೇಳಿದರು. ರಾಜ್ಯ ರೈತಸಂಘದ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮಾತಾಡುತ್ತಾ ರೈತರ, ಕೃಷಿಕೂಲಿಕಾರರ, ಮತ್ತು ಬೀಡಿ ಮಜೂರರ ಬೇಡಿಕೆಗಳ ಬಗ್ಗೆ ಕರ್ನಾಟಕ ರಾಜ್ಯ ಸರಕಾರವು ವಹಿಸಿರುವ ಕಠಿಣ ಧೋರಣೆಯ ಬಗ್ಗೆ ಟೀಕಿಸುತ್ತಾ, ತಾ. 21-11-1979 ರಂದು ಜಿಲ್ಲಾಧಿಕಾರಿಯವರ ಆಫೀಸಿನ ಎದುರು ನಡೆಯುವ ಮತಪ್ರದರ್ಶನಕ್ಕೆ ಸಜ್ಜಾದ ಸ್ವಯಂ ಸೇವಕರನ್ನು ಅಬಿನಂಧಿಸಿದರು. ಸಭೆಯ ಮೊದಲು ಹಿಂದೆಂದೂ ಬಂಟ್ವಾಳದಲ್ಲಿ ನಡೆಯದ, ಸುಮಾರು 2500ಕ್ಕೂ ಮಿಕ್ಕಿ ಜನರಿರುವ ಮೆರವಣಿಗೆ ಮತ್ತು ಸಭೆಯನ್ನು ಏರ್ಪಡಿಸಲಾಗಿತ್ತು. ○

ಬೆಂಗಳೂರು ಬಂದ್

[ಒಂದನೇ ಪುಟದಿಂದ]

ಸುವಂತೆ ಒತ್ತಾಯಿಸಲು ಡಿಸೆಂಬರ್ ಮೂರರಂದು ಬೆಂಗಳೂರು ಬಂದ್ ಕಾರ್ಯಾಚರಣೆಗೆ ಮುಷ್ಕರದ ಸೌಹಾರ್ದತಾ ಸಮಿತಿಯೂ, ಹೆಚ್ಚಿನ ಎಲ್ಲಾ ರಾಜಕೀಯ ಪಕ್ಷಗಳೂ ಕರೆ ಇತ್ತಿವೆ. ಬೆಂಗಳೂರು ಬಂದ್‌ಗೆ ಸಂಪೂರ್ಣ ಬೆಂಬಲವನ್ನು ಸೂಚಿಸುತ್ತಾ, ಅಂದೇ ರಾಜ್ಯದಾದ್ಯಂತ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮತ್ತು ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಕರೆ ಇತ್ತಿದ್ದಾರೆ. ○

ದಾಂಡೇಲಿ ಪೇಪರ್ ಮಿಲ್ ಕಾರ್ಮಿಕರ ಅನಿರ್ದಿಷ್ಟ ಮುಷ್ಕರ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಕಾಗದ ಕಾರ್ಖಾನೆಯ ಕಾರ್ಮಿಕರು ಗ್ರೇಡೇಶನ್ ಸಲುವಾಗಿ13 ತಿಂಗಳ ಹಿಂದೆ ಕೊಟ್ಟ ನೋಟೀಸಿನ ಬಗ್ಗೆ ಮಾಲೀಕವರ್ಗವು ಯಾವುದೇ ತೀರ್ಮಾನಕ್ಕೆ ಬರದೇ ಇದ್ದ ಕಾರಣ ತಾ. 24-10-79 ರಂದು ಅನಿರ್ದಿಷ್ಟ ಮುಷ್ಕರದ ಮೇಲೆ ಹೋಗುವದಾಗಿ ಸಾರಲಾಗಿತ್ತು. ಆದರೆ ಈ ಮಧ್ಯೆ ಆಡಳಿತವರ್ಗವು ತಾ. 5 ನವೆಂಬರದೊಳಗೆ ಯಾವುದೇ ಒಂದು ತೀರ್ಮಾನಕ್ಕೆ ಬರುವದಾಗಿ ಸಾರಿತ್ತು ಮತ್ತು ಈ ಅವಧಿಯಲ್ಲಿ ಯಾವದೇ ತೀರ್ಮಾನಕ್ಕೆ ಬರದೇ ಇದ್ದ ಕಾರಣ ತಾ. 12-11-79 ರಂದು ಮುಷ್ಕರದ ಮೇಲೆ ಹೋಗಲು ಕಾರ್ಮಿಕ ಸಂಘಗಳು ಸಾರಿದವು. ತಾ. 11-11-79 ರಂದು ತನ್ಮಧ್ಯೆ ಮಾತುಕತೆಗಾಗಿ ಕಾರ್ಮಿಕ ಪ್ರತಿನಿಧಿಗಳನ್ನು ಆಡಳಿತ ವರ್ಗದವರು ಕರೆದರು ಮತ್ತು ಕೊಟ್ಟ ಎಲ್ಲ 13 ಬೇಡಿಕೆಗಳಲ್ಲಿ ತುಟ್ಟಿಭತ್ಯೆ ಒಂದನ್ನು ಕೊಡಲು ಒಂದು ಒಡಂಬಡಿಕೆಗೆ ಬಂದಿದ್ದು ಉಳಿದವುಗಳ ಬಗ್ಗೆ ತಾ. 14-11-79 ರಂದು ಬೊಂಬ್ಯಾ ಹೆಡ್ ಆಫೀಸಿನಲ್ಲಿ ನಡೆಯಲಿರುವ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಚರ್ಚಿಸಿ ತಾ. 21-11-79 ರೊಳಗೆ ಒಂದು ತೀರ್ಮಾನಕ್ಕೆ ಬರುತ್ತೇವೆಂದು ಡಿ. ಎಲ್. ಸಿ. ಬೆಳಗಾಂ ಇವರ ಸಮಕ್ಷಮ ಮಾತು ಕೊಟ್ಟಿದ್ದರು. ಅವರ ಈ ಮಾತಿಗೆ ಮಾನ್ಯತೆ ಕೊಟ್ಟು ಮುಷ್ಕರವನ್ನು ಮುಂದೂಡಲಾಯಿತು. ಆದರೆ ಆಡಳಿತವರ್ಗವು ಕೊಟ್ಟ ಮಾತಿನಂತೆ 21 ರೊಳಗೆ ಯಾವದೇ ತೀರ್ಮಾನಕ್ಕೆ ಬರದೇ ಕೇವಲ ಕಾಲಹರಣ ಮಾಡುತ್ತಿರುವುದರಿಂದ ಕಾರ್ಮಿಕರು ತಾ. 22-11-79 ರಂದು ಬೆಳಿಗ್ಗೆ 7 ಗಂಟೆಯಿಂದ ಅನಿರ್ಧಿಷ್ಟ ಮುಷ್ಕರದ ಮೇಲೆ ಹೋಗಿದ್ದಾರೆ. ಈ ಕಾರ್ಮಿಕರ ನ್ಯಾಯಬದ್ಧ ಹೋರಾಟಕ್ಕೆ ಎಲ್ಲ ಕಾರ್ಮಿಕ ಸಂಘಗಳು ಸಾರ್ವಜನಿಕರು ಸಹಕಾರ ನೀಡಬೇಕೆಂದು ದಾಂಡೇಲಿ, ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ನಿನ ಅಧ್ಯಕ್ಷರು ಕೇಳಿಕೊಂಡಿದ್ದಾರೆ. ○

ರೈತ ಕೂಲಿಗಾರರ ಸಭೆ

ತಾ. 27.11.79 ರಂದು ಪಾವಗಡ ತಾಲ್ಲೂಕು ಗೌಡೇಟಿಯಲ್ಲಿ ಪಂಚಾಯಿತಿ ಮಟ್ಟದ ರೈತ ಕೂಲಿಗಾರರ ಸಭೆಯು ನಾಗರತ್ನಪ್ಪನವರ ನೇತೃತ್ವದಲ್ಲಿ ನೆರವೇರಿತು.

ರೈತರ ಸಮಸ್ಯೆಗಳನ್ನು ಚರ್ಚಿಸಲಾಯಿತು. ಭೂಗ್ರಹಣ ಚಳುವಳಿ ಹೂಡಲು, ಬಂಜರುಭೂಮಿ, ನಿವೇಶನಗಳ ಹಂಚಿಕೆಗಾಗಿ ಸರಕಾರಕ್ಕೆ ಮನವಿ ಸಲ್ಲಿಸಲು ತಿರ್ಮಾನಿಸಲಾಯಿತು.

ಸಭೆಯು ರೈತ ಸಂಘವನ್ನು ಸ್ಥಾಪಿಸಲು ಕಾಂ. ಶಂಕರನಾರಾಯಣಪ್ಪ ಮಾರ್ಗದರ್ಶನದಲ್ಲಿ ಜನವರಿ ಮಾಹೆಯಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲು ತಿರ್ಮಾನಿಸಿತಲ್ಲದೆ, ಈಗ ಉದ್ಭವಿಸಿರುವ ಮಿದುಳುಜ್ವರ ರೋಗಕ್ಕೆ ಮುನ್ನೆಚ್ಚರಿಕೆಗೆ ರೋಗನಿರೋಧ ಸಮಿತಿಗೆ ಜಿ. ಚೌಡೆಗೌಡ, ಮಾರಪ್ಪ ಉಪಾಧ್ಯಾಯ,ಸತ್ಯನಾರಾಯಣ, ಓಬಣ್ಣನವರನ್ನು ನೇಮಿಸಲಾಯಿತು. ಮಾರಪ್ಪ ಉಪಾಧ್ಯಾಯರು ಧನ್ಯವಾದಗಳನ್ನು ಅರ್ಪಿಸಿದರು. ○

ಕರ್ನಾಟಕ ಪ್ರಾಂತ ರೈತ ಸಂಘ

ರಾಜ್ಯಮಂಡಳಿ ಸದಸ್ಯರ ಗಮನಕ್ಕೆ

ಪ್ರಿಯ ಕಾಮ್ರೇಡ್ಸ್,

ಕರ್ನಾಟಕ ಪ್ರಾಂತ ರೈತಸಂಘಕ್ಕೆ ಸದಸ್ಯರನ್ನು ನೊಂದಾಯಿಸಲು ಬೇಕಾದ ರಸೀದಿ ಪುಸ್ತಕಗಳು ಹಾಗೂ ಕರಪತ್ರಗಳನ್ನು ಮುದ್ರಿಸಿದೆ. ಸದಸ್ಯತ್ವದ ಕೋಟಾ ನಿಗದಿಯಾಗಿರುವಂತೆ, ರಾಜ್ಯ ಮಂಡಳಿ ಸದಸ್ಯರು ತಮ್ಮ. ತಮ್ಮ ಪ್ರದೇಶಗಳಿಗೆ ಬೇಕಾಗುವಷ್ಟು ರಸೀದಿ ಪುಸ್ತಕಗಳು ಹಾಗೂ ಕರಪತ್ರಗಳನ್ನು ರಾಜ್ಯಸಮಿತಿ ಕಛೇರಿಯಲ್ಲಿ ವಿಚಾರಿಸಿ ಪಡೆದುಕೊಳ್ಳಬೇಕಾಗಿ ವಿನಂತಿ.

ಹೆಚ್. ಮುಗುವಾಳಪ್ಪ
ಅಧ್ಯಕ್ಷರು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT